International Journal of Kannada Research 2023; 9(4): 83-89

International Journal of Kannada Research
www.kannadajournal.com

ISSN: 2454–5813
IJKR 2023; 9(4): 83-89
© 2023 IJKR
www.kannadajournal.com
Received: 08-09-2023
Accepted: 13-10-2023

**ರೇವಣಸಿದ್ದಯ್ಯ ಸರ್ತಿಮಠ**
ಸಂಶೋಧನಾ ಅಭ್ಯರ್ಥಿ, ವೇದಾಂತ, ವಿಭಾಗ, ಕರ್ನಾಟಕ ಸಂಸ್ಕೃತ ವಿಶ್ವ ವಿದ್ಯಾಲಯ, ಬೆಂಗಳೂರು, ಕರ್ನಾಟಕ, ಭಾರತ

**Corresponding Author:**
**ರೇವಣಸಿದ್ದಯ್ಯ ಸರ್ತಿಮಠ**
ಸಂಶೋಧನಾ ಅಭ್ಯರ್ಥಿ, ವೇದಾಂತ, ವಿಭಾಗ, ಕರ್ನಾಟಕ ಸಂಸ್ಕೃತ ವಿಶ್ವ ವಿದ್ಯಾಲಯ, ಬೆಂಗಳೂರು, ಕರ್ನಾಟಕ, ಭಾರತ

# ಜ್ಞಾನದ ಬೀಜ ಶ್ರವಣಾದಿಗಳು

**ರೇವಣಸಿದ್ದಯ್ಯ ಸರ್ತಿಮಠ**

**DOI:** https://doi.org/10.22271/24545813.2023.v9.i4b.901

**ಪೀಠಿಕೆ**

ಎಲ್ಲ ವೇದಾಂತಗಳ ಸಾರರೂಪದ ಏನು ಎಂದರೆ ಉಪದೇಶ ಮಾಡುತ್ತಾರೆಂದರೆ, ಸಾಧಾರಣ ರೂಪದಿಂದ ಬ್ರಹ್ಮಸ್ವರೂಪ ಆತ್ಮವು ಜ್ಞಾತ (ಗಮನಕ್ಕೆ) ವಾಗಿರುತ್ತದೆ, ಆದರೆ ವಿಶೇಷ ರೂಪದಿಂದ ಬ್ರಹ್ಮವನ್ನು ತಿಳಿದುಕೊಳ್ಳಬೇಕೆಂಬ ಮಹತ್ತರವಾದ ಇಚ್ಛೆ ಉಂಟಾದರೆ ಏನು ಮಾಡಬೇಕು. ಇಲ್ಲಿ ವಿಶೇಷ ಮತ್ತು ಸಾಧಾರಣ(ಸಾಮಾನ್ಯ) ಎಂಬ ಚರ್ಚೆಯೇ ಬಹುದೊಡ್ಡ (ಜಿಜ್ಞಾಸೆಯಾಗಿದೆ), ಆತ್ಮನ ಅಪರೋಕ್ಷ ಸಾಕ್ಷಾತ್ಕಾರ(ಜ್ಞಾನ)ವನ್ನು ಮಾಡಿಕೊಳ್ಳಲೇಬೇಕಾಗಿದೆ. ವಿಶೇಷ ರೂಪ ಆತ್ಮನ ಜ್ಞಾನವಾಗಬೇಕಾದರೆ ಏನು ಮಾಡಬೇಕು. ಆ ಸಂದರ್ಭದಲ್ಲಿ ಬರುವ ಪ್ರಶ್ನೆಗೆ ಉತ್ತರವೇ ಇದಾಗಿದೆ. ಅದು ಏನೆಂದರೆ, ಬೃಹದಾರಣ್ಯಕ ಉಪನಿಷತ್ತಿನಲ್ಲಿ ಹೇಳಿದ ಮಂತ್ರವು ಅದು ಹೀಗಿದೆ.

"ತತ್ರ ತಾವತ್ ಆತ್ಮಾ ವಾ ಅರೆ ದ್ರಷ್ಟವ್ಯ: ಶೋತವ್ಯೋ ಮಂತವ್ಯ:",॥೧॥ ಹೀಗೆ ಶ್ರವಣ ಮಾಡಬೇಕು, ಮನನ ಮಾಡಬೇಕು ಎಂದು ಇತ್ಯಾದಿ ಶ್ರುತಿಗಳಿಂದ ವೇದಾಂತ ಶ್ರವಣ ವಿಧಿಯೆ ಪ್ರತೀತಿಯಾಗುತ್ತದೆ. ಆದ್ದರಿಂದ ವಿಧಿ ಅಂದರೆ ಏನು? ವಿಧಿ ಎಷ್ಟು ಪ್ರಕಾರ ಎಂಬುವುದನ್ನು ತಿಳಿದುಕೊಳ್ಳುವುದು ಬಹುಮುಖ್ಯ.

ವಿಧಿ ಎಂದರೆ ಅದ್ವೈತಿಗಳ ಬುದ್ಧಿಯಲ್ಲಿ ಪ್ರಥಮ ಎದ್ದು ನಿಲ್ಲುವದು ಕರ್ಮವೆಂಬ ಅರ್ಥದಲ್ಲಿ. ಇದು ಶುದ್ಧ ತಪ್ಪು. ಏಕೆಂದರೆ ಅದನ್ನು ಪೂರ್ವಾಪರವಾಗಿ ವಿಚಾರ ಮಾಡಿದರೆ ಕರ್ಮವು ಜ್ಞಾನಕ್ಕೆ ಸಾಧನೆಯಾದರೆ ಅದು ಕರ್ಮವೇ ಅಲ್ಲ. ಅದು ಪರಿಶುದ್ಧ ಜ್ಞಾನವೇ ಎಂದು ಶಾಸ್ತ್ರಪ್ರಮಾಣಗಳಿಂದ ತಿಳಿದುಬರುತ್ತದೆ. ಈಗ ವಿಧಿ ಅಂದರೆ ಏನು? ಇದನ್ನು ವಿಚಾರಿಸೋಣ. ಆದರೆ ಅನೇಕ ಮತವಾದಿಗಳು ವಿಧಿ ಎಂಬ ಪದಕ್ಕೆ ಏನೇನು ಅರ್ಥಮಾಡಿದ್ದಾರೆ ಎಂಬುದನ್ನು ತಿಳಿದುಕೊಳ್ಳೋಣ.

**ವಿಧಿ:** "ಶಾಸ್ತ್ರೋಕ್ತ ವ್ಯವಸ್ಥಾ" ಶಾಸ್ತ್ರದಲ್ಲಿ ಹೇಳಿರುವ ನೀತಿಯು ಅಥವಾ ಕಟ್ಟಳೆಯು, ಇದು ಶಾಸ್ತ್ರ ಶ್ರವಣ ಮಾಡಿದವರಿಗೆ ಯಾವ ಕಟ್ಟಳೆ ಯಾವ ನೀತಿ ಎಂದು ತಿಳಿಯುತ್ತದೆ. ಅದನ್ನು ಅವರೇ ಅರ್ಥೈಸಿಕೊಳ್ಳಬೇಕು ವಿಸ್ತರಿಸುವ ಪ್ರಮೆಯವೇ ಇಲ್ಲ. ಇದಕ್ಕೆ ಗೀತಾ ಪ್ರಮಾಣ.

"ತಸ್ಮಾಚ್ಛಾಸ್ತ್ರಂ ಪ್ರಮಾಣಂತೇ ಕಾರ್ಯಕಾರ್ಯವವಸ್ಥಿತೌ ।
ಜ್ಞಾತ್ವಾ ಶಾಸ್ತ್ರಂ ವಿಧಾನೋಕ್ತಂ ಕರ್ಮಕರ್ತುಮಿಹಾರ್ಹಸಿ॥ ॥೨॥

**ಇದಕ್ಕೆ ಇನ್ನೊಂದು ವಾಕ್ಯವಿದೆ. ಅದು ಅದ್ವೈತಾಸ್ತ್ರಕ್ಕೆ ಅತ್ಯಂತ ಪೂರಕವಾದ ವಾಕ್ಯವು. ಅದೇನೆಂದರೆ ?**

**"ವಿಧಿ: ಅಜ್ಞಾತಾರ್ಥ ಜ್ಞಾಪಕೋ ವೇದ ಭಾಗ",:** ಅರ್ಥಾತ್ ಯಾವುದು ನಮಗೆ ತಿಳಿದಿರುವುದಿಲ್ಲವೋ ಅದನ್ನು ತಿಳಿಸಿಕೊಡುವ ವಾಕ್ಯವು, ಅಥವಾ ನೆನಪಿಸಿಕೊಡುವ ವೇದವಾಕ್ಯದ ಒಂದು ಭಾಗವು. ಇಲ್ಲಿ ಒಂದು ಜಿಜ್ಞಾಸೆ ಉಂಟಾಗುವುದು ಏನೆಂದರೆ, ಏನನ್ನು ಮರೆತಿದ್ದೇವೆ? ಎಂಬ ಪ್ರಶ್ನೆಗೆ ನಮ್ಮನ್ನೆ ನಾವು ಮರೆತಿದ್ದೇವೆ. ತನಗಿಂತಲೂ ಬೇರೆಯಾಗಿರುವ ವಸ್ತುಗಳನ್ನು ಮರೆತರೆ ಶಂಕೆಯಿಲ್ಲ. ಆದರೆ ತನ್ನನ್ನೆ ತಾನು ಮರೆತಿದ್ದಾನೆ. ದೇಹಾದಿ ಸಕಲ ಇಂದ್ರಿಯಗಳಲ್ಲಿ ಕೂಡಿ ಅವುಗಳೇ ನಾವೆಂದು ವ್ಯವಹರಿಸುವ ಜೀವನು ತಾನು ಪರಮಾತ್ಮ ಸ್ವರೂಪನೆಂಬುದನ್ನು ಮರೆತಿದ್ದಾನೆ. ಅದನ್ನು ನೆನಪಿಸಿಕೊಡುವದೇ ವಿಧಿ ವಾಕ್ಯವು. ಅಂತೆಯೇ ಶಾಸ್ತ್ರವು ಶಾಸ್ತ್ರವೆಂದರೇನು ಅನ್ನುವುದಕ್ಕೆ ಉತ್ತರ ನೀಡಿದೆ "ಅಜ್ಞಾತ ಜ್ಞಾಪಕಂ ಶಾಸ್ತ್ರಂ" ಯಾವುದು ತಾನೇ ಆಗಿರುವನೋ ಅದನ್ನೆ ನಾನಲ್ಲ ಎಂದು ಮರೆತಿರುವ ಮಾನವನಿಗೆ ಅದೇ

ನೀನಾಗಿರುವಿ ಎಂದು ನೆನಪಿಗೆ ತಂದು ಕೊಡುವುದೆ ಶಾಸ್ತ್ರ ಎಂದು ಶಾಸ್ತ್ರ ಹೇಳುತ್ತಿದೆ. ಇನ್ನು ಯಾವ ಯಾವ ಮತದವರು ವಿಧಿಗೆ ಏನೆಂದು ಅರ್ಥೈಸಿದ್ದಾರೆ ಎಂದರೆ

**"ಅಪ್ರಾಪ್ತ ಪ್ರಾಪಕೋ ವಿಧಿರಿತಿ ವೈದಿಕಾ:",** ವೈದಿಕರು ಅಂದರೆ ಯಾರೆಂಬುದು ನಿಮ್ಮ ಗಮನದಲ್ಲಿರಲಿ. ಅದರಲ್ಲಿಯೂ ಅದ್ವೈತಿಗಳು ನಿಜವಾಗಿಯೂ ನೆನಪಿನಲ್ಲಿಡಬೇಕಾದ ವಿಷಯ ಇದು. ಅದು ಏನೆಂದರೆ "ವೈದಿಕ: ವೇದ ಪ್ರತಿಪಾದ್ಯಾರ್ಥ ವಿರುದ್ಧಾರ್ಥ ಪ್ರತಿಪಾದಿಕ:" ವೇದಗಳು ಯಾವ ಅರ್ಥವನ್ನು ಪ್ರತಿಪಾದಿಸುತ್ತವೆಯೋ, ಅದಕ್ಕಿಂತಲೂ ಬಿನ್ನವಾಗಿ ವಿರುದ್ಧವಾದ ಅರ್ಥವನ್ನು ಯಾರು ಹೇಳುತ್ತಾರೆಯೋ ಅವರೆ ವೈದಿಕರು.

**"ಶಬ್ದಭಾವನಾ ವಿಧಿ ರೀತಿ ಭಾಟ್ಟಾ:",** ಶಬ್ದ ಭಾವನಾವಿಧಿ ಎಂದು ಭಾಟ್ಟರು. ಅಂದರೆ ಶಬ್ದದ ಭಾವನೆಯನ್ನು ಮಾಡುವುದು, ನಮ್ಮ ಭಾವನೆಯಂತೆ ಶಬ್ದಗಳ ಅರ್ಥವಿರುತ್ತದೆ ಎಂದು ಭಾವನಾತ್ಮಕವಾದಿಗಳ ಹಾಗೆ ಮಾತನಾಡುವ ಭಾಟ್ಟರು, ಶಬ್ದಭಾವನಾವಾದಿಗಳು ಪ್ರಭಾಕರರು ಎಂದರೆ "ನಿಯೋಗೋವಿಧಿರೀತಿ ಪ್ರಭಾಕರಾ: ನಿಯೋಗ: ವಿಧಿ: ಇತಿ ಪ್ರಭಾಕರಾ:", ನಿಯೋಗಾತ್ಮಕ ವಿಧಿಯು ಎಂದು ಪ್ರಭಾಕರರು ಹೇಳುತ್ತಾರೆ. ನಿಯೋಗವೆಂದರೆ ಪ್ರತಿನಿಧಿ ವ್ಯವಸ್ಥೆ, ಅಥವಾ ಪ್ರಾತಿನಿಧ್ಯ ಪದ್ಧತಿ, ಅದನ್ನೆ ಇಂಗ್ಲೀಷ್‌ನಲ್ಲಿ Delegacy (Mission) ಎಂದು ಕರೆಯುತ್ತಾರೆ. ಈ ಪ್ರಕಾರ ಪ್ರಭಾಕರರು ತಮ್ಮದೆ ಆಗಿರುವ ಪ್ರತಿನಿಧಿ ವ್ಯವಸ್ಥೆ ಮಂಡಿಸುವ ರೀತಿಯನ್ನು ಹೇಳುತ್ತಾರೆ.
ಇನ್ನು ತಾರ್ಕಿಕ ಮೊದಲಾದವರು ವಿಧಿಯ ಅರ್ಥಕ್ಕೆ ಏನು ಹೇಳುತ್ತಾರೆ ಎಂದರೆ "ವಿಧಿ: ಇಷ್ಟ ಸಾಧನತಾ ಭೋಧಕ ಪ್ರತ್ಯೇಯ ಸಮಭಿವ್ಯಾಹೃತ ವಾಕ್ಯಮಿತಿ ತಾರ್ಕಿಕಾದಯ:"

**ಅರ್ಥ:–** ಇಷ್ಟವಾದ ಉಪಕರಣ ಹೊಂದಿರುವುದನ್ನು ತಿಳಿಸುವ ಜ್ಞಾನದಿಂದ ಕೂಡಿಕೊಂಡಿರುವ ವಾಕ್ಯವೇ ವಿಧಿ ಎಂದು ತಾರ್ಕಿಕ ಮೊದಲಾದವರ ಅಭಿಪ್ರಾಯ. ಇಲ್ಲಿ ಉಪಕರಣ ಅಂದರೆ ಏನು ಎಂದು ತಿಳಿಯುವುದಾದರೆ, ಉಪಕರಣ ಅಂದರೆ ಸಾಧನ. ಅನೇಕ ಸಾಧನಗಳಿದ್ದರೂ ಅದರಲ್ಲಿ ಒಂದು ಮುಖ್ಯ ಸಾಧನ ಎಂಬುದು ಇರುತ್ತದೆ. ಹಾಗೆ ಮುಖ್ಯ ಸಾಧನರೂಪದಿಂದ ಯಾವದಾದರೊಂದನ್ನು ತಿಳಿಸುವ ಜ್ಞಾನದೊಡನೆ ಕೂಡಿಕೊಂಡಿರುವುದೇ, ವಿಧಿ ಅಥವಾ ಕೂಡಿಕೊಂಡಿರುವ ವಾಕ್ಯವೇ ವಿಧಿ ಎಂದು ಹೇಳುತ್ತಾರೆ.
ಇಂಗ್ಲೀಷ್‌ನಲ್ಲಿ Instrument (ಇನ್‌ಸ್ಟ್ರುಮೆಂಟ್) ಎನ್ನುವರು ಅಥವಾ (especially one for delicate or scientific work) ಎಂದು ಸಹ ಹೇಳುತ್ತಾರೆ. ಇಲ್ಲಿ ಶಾಸ್ತ್ರವೆಂದರೆ ನಾಲ್ಕು ವೇದಗಳು ಮತ್ತು ಪಂಚರಾತ್ರ ಮಹಾಭಾರತ, ಮೂಲರಾಮಾಯಣ ಮತ್ತು ಹದಿನೆಂಟು ಪುರಾಣಗಳು. ಇವುಗಳನ್ನು ಬಿಟ್ಟು ಬೇರೆ ಯಾವುಗಳನ್ನು ಪ್ರಮಾಣ ಎಂದು ಅಂಗೀಕರಿಸಲು ಸಾಧ್ಯವೇ ಇಲ್ಲ. ಅಂದರೆ ಶಾಸ್ತ್ರಗಳು ಕರ್ಮವನ್ನು ಆಚರಿಸಿರಿ ಎಂದು ಹೇಳುವುದಾದರೆ ಯಾವ ಕರ್ಮ? ಗೀತೋಪದೇಶ ಕೃತಕರ್ತೃವಾದ ಕೃಷ್ಣನು, ಶಾಸ್ತ್ರವೇ ಪ್ರಮಾಣವೆಂದು ಹೇಳುವಲ್ಲಿ ನಿನಗೆ ಶಾಸ್ತ್ರವೇ ಪ್ರಮಾಣವೆಂದರೆ, ನೀನು ಯಾವ ಸ್ಥಾನದಲ್ಲಿ ಬಂದು ನಿಂತಿರುವಿ ನಿನಗೆ ನೀನೆ ಪ್ರಮಾಣ. ಅಂದರೆ ಕರ್ಮದ ಕಟ್ಟಳೆಗಳನ್ನು ಅರಿತು ಮಾಡುವ ಕರ್ಮವೆಂದು ತಿಳಿ ಎಂದು ಹೇಳುತ್ತಾನೆ ಶ್ರೀ ಕೃಷ್ಣ.
"ವಿಧಿ ವಿಧಾಯಕ ವಾಕ್ಯಮ್ ವಿಧೀ" ಎಂದು ಹೇಳಿದರೂ ಸಹ ವಿಧಾಯ ಪದಕ್ಕೆ ಅರ್ಥ ಸಾಕಷ್ಟಿವೆ. ಇಂಗ್ಲೀಷಿನಲ್ಲಿ Goodby ಎಂಬುದಕ್ಕೂ ವಿದಾಯ ಅನ್ನುತ್ತಾರೆ. ಅಂದರೆ Salutation, ಇಲ್ಲಿ ವಿದಾಯ ವಾಕ್ಯಕ್ಕೆ ಅರ್ಥ ನಿಯಮವನ್ನು ಬೋಧಿಸುವ ಮತ್ತು ವಾಕ್ಯವೆಂದು ತಿಳಿಯಬೇಕು. ಆದರೆ ನಿಯಮಕ್ಕೆ ಅರ್ಥಗಳು ಬಹಳಷ್ಟಿವೆ ಅದನ್ನು ಅರ್ಥೈಸುವುದು ಒಳಿತಲ್ಲ. ಇನ್ನೊಂದು ಅದ್ವೈತಕ್ಕೆ ಸಂಬಂಧಿಸಿದ ವಿಧಿ ಅರ್ಥ ಬಹಳ ಮಹತ್ವಪೂರ್ಣವಾಗಿದೆ. "ಪುರುಷ ಪ್ರವರ್ತಕ ವಾಕ್ಯಂ" ಪುರುಷನನ್ನು ಕಾರ್ಯದಲ್ಲಿ ತೊಡಗಿಸುವುದು. ಅಂದರೆ ಕಾರ್ಯ ಪ್ರವೃತ್ತನಾಗೆಂದು ಹೇಳುವ ವಾಕ್ಯವು. ಇನ್ನು ವಿಧಿ ಎಂದರೇನು ಎಂಬುವ ಜ್ಞಾನವಾಯಿತು. ಮುಂದೆ ವಿಧಿಗಳು ಎಷ್ಟು ಪ್ರಕಾರವಿರುವದು ಎಂದು ತಿಳಿಯಬೇಕು. ವಿಧಿಗಳಲ್ಲಿ ಮೂರು ಪ್ರಕಾರ 1) ಅಪೂರ್ವವಿಧಿ 2) ನಿಯಮವಿಧಿ 3) ಪರಿಸಂಖ್ಯಾವಿಧಿ.

**1) ಅಪೂರ್ವವಿಧಿ:** ಮೂರು ಕಾಲಗಳಲ್ಲಿ ಯಾವುದೇ ಪ್ರಮಾಣದಿಂದಲೂ ಕೂಡಾ ಪ್ರಾಪ್ತಿಯಾಗುವುದಿಲ್ಲವೋ, ಅದರ ಪ್ರಾಪ್ತಿಯನ್ನು ಮಾಡಿಕೊಳ್ಳುವ ವಿಧಿ ಅಪೂರ್ವವಿಧಿ ಎಂದು ಹೇಳಲಾಗುತ್ತಿದೆ. ಹೇಗೆಂದರೆ, ದರ್ಶ ಪೂರ್ಣ ಮಾಸದ ಪ್ರಕರಣದಲ್ಲಿ "ಪರೋಡಾಶದ ಸಲುವಾಗಿ ವ್ರಿಹಿಯನ್ನು ಧ್ಯಾನದ ಅಪೇಕ್ಷೆಯಿಂದ ಮರೋಡಾಶದ ಸಲುವಾಗಿ ಅಪೇಕ್ಷಿತವಾದ ಧ್ಯಾನಗಳನ್ನು ನೀರಿನಿಂದ ಪ್ರೋಕ್ಷಣ (ಸಿಂಪಡಿಸುವುದು) ಮಾಡಬೇಕಾಗುವುದು. ದೃಷ್ಟ (ಕಾಣುವ), ಅದೃಷ್ಟ (ಕಾಣದೆ ಇರುವ) ಬೇರೆ ಪ್ರಯೋಜನದ ಸಲುವಾಗಿ ಬೇರೆ ಪ್ರತ್ಯಕ್ಷವೇ ಮೊದಲಾದ ಪ್ರಮಾಣಗಳಿಂದ "ಬತ್ತದ ಪ್ರೋಕ್ಷಣದ ಪ್ರಾಪ್ತಿ ಇರುವುದಿಲ್ಲ. ಅಂದರೆ ಒಂದೇ **"ವ್ರೀಹೀನ್ ಪ್ರೋಕ್ಷತ"** ಈ ಯಾವ ವಿಧಾಯಕ ವಾಕ್ಯದಿಂದ ಅವರದ್ದು ಪ್ರಾಪ್ತಿ ಇರುತ್ತದೆ. ಆದ್ದರಿಂದ "ವಿಧಾಯಕ ಶಬ್ದವು" ಅಪೂರ್ವವಿಧಿ ಇರುತ್ತದೆ. ಇನ್ನು ವಿಧಾಯಕ ಎಂದರೇನು? ಪ್ರಮಾಣವೆಂದರೇನು? ಇವುಗಳ ಚಿಂತನೆ ಬಹಳ ರಹಸ್ಯವಾಗಿದೆ ಇದು ಬ್ರಹ್ಮಸೂತ್ರ, ಸಿದ್ಧಾಂತಲೇಶ ಸಂಗ್ರಹ, ವಿಚಾರ ಚಂದ್ರೋದಯದ ಆರನೇ ಕಲಾದಲ್ಲಿ ವಿಶೇಷವಾಗಿದೆ, ಇನ್ನೊಂದು ಅಪೂರ್ವವಿಧಿಗೆ ಲಕ್ಷಣ ಹೀಗಿದೆ.

ಅಪೂರ್ವ ವಿಧಿ: ಪ್ರಮಾಣಾಂತರೇಣಾತ್ಯಂತೌಪ್ರಾಪ್ತಾರ್ಥ
ವಿಧಾಯಕೋ ವಿಧಿ: ಯಥಾ ವ್ರೀಹೀನ್ಪ್ರೋ
ಕ್ಷತೀತಿ ವ್ರೀಹಿ ಪ್ರೋಕ್ಷಣವಿಧಿ ॥೧॥

ಅಂದರೆ ಮೇಲೆ ಹೇಳಿದ ಅರ್ಥವನ್ನೇ ಗಟ್ಟಿಗೊಳಿಸಲು ಈ ಲಕ್ಷಣವು ಕೂಡಾ ಹೊರಟಿದೆ ಎಂದು ತಿಳಿಯಬೇಕು. ಹೇಗೆಂದರೆ, ಬೇರೆಯಾವ ಪ್ರಮಾಣಗಳಿಂದ ಅತ್ಯಂತವಾಗಿ (ಎಂದಿಗೂ ಸಾಧ್ಯವಲ್ಲದ) ಪ್ರಾಪ್ತವಾಗದಿರುವ ವಿಷಯವನ್ನು ವಿಧಾನ ಮಾಡುವ ವಿಧಿಯು ಯಾವುದೋ ಅದು ಅಪೂರ್ವವಿಧಿ, ಹೇಗೆಂದರೆ "ವ್ರೀಹೀನ್ಪ್ರೋಕ್ಷತೀತಿ" ಭತ್ತವನ್ನು ನೀರಿನಿಂದ ಸಿಂಪಡಿಸಬೇಕು. ಪ್ರೋಕ್ಷಣೆ ವಿಧಿಯಾಗಿರುತ್ತದೆ. ಕಾರಣ ಇದು ಅಪೂರ್ವವಿಧಿ ಎಂದು ಹೇಳಿಸಿಕೊಳ್ಳುತ್ತದೆ.

**2. ನಿಯಮವಿಧಿ:** ಪಕ್ಷದಲ್ಲಿ ಯಾವುದು ಪ್ರಾಪ್ತವಾಗಿದೆಯೋ ಅದರ ಅಪ್ರಾಪ್ತಾ ಅಂಶವನ್ನು ಪರಿಪೂರ್ಣಮಾಡಲು ಶಕ್ಯವಾದ ವಿಧಿ ನಿಯಮವಿಧಿ ಎಂದು ಹೇಳಿಸಿಕೊಳ್ಳುತ್ತದೆ. ಹೇಗೆಂದರೆ, ಅಪೂರ್ವವಿಧಿಗಿಂತಲೂ ನಿಯಮವಿಧಿ ವಿಶೇಷವಾಗಿರುವುದು. ಹೇಗೆಂದರೆ ನಿಯಮವಿಧಿಯಲ್ಲಿ ಶ್ರುತಿಯು ಇಲ್ಲದೆಯೂ ಕೂಡ ಬೇರೆ ಪ್ರಮಾಣದಿಂದ ಒಂದೇ ಪಕ್ಷದಲ್ಲಿ ಕ್ರಿಯೆಯು ಪ್ರಾಪ್ತಿಯಾಗುತ್ತದೆ. ಒಂದು ವಸ್ತುವಿನಲ್ಲಿ ಒಂದು ಕ್ರಿಯೆಯಾಗುತ್ತದೆ. ಅದೇ ಕಾಲದಲ್ಲಿ ಅದರಲ್ಲಿ ಮತ್ತೊಂದು ಕ್ರಿಯೆಯು

ಉಂಟಾಗುವುದಿಲ್ಲ. ಒಂದೇ ಕಾಲದಲ್ಲಿ ಒಂದೇ ವಸ್ತುವುನಲ್ಲಿ ಎರಡು ಕ್ರಿಯೆಗಳು ನಡೆಯಲು ಸಾಧ್ಯವಿಲ್ಲ. ಆದ್ದರಿಂದ ಪಕ್ಷಾಂತರದಲ್ಲಿ ಬೇರೆ ಬೇರೆ ಕ್ರಿಯೆಗಳು ಆಗುತ್ತವೆ. ಭತ್ತದಿಂದ ಅಕ್ಕಿಯು ಹೊರಗೆ ಬರಬೇಕಾದರೆ ಅದೇ ಕ್ಷಣದಲ್ಲಿ ಒನಕೆಯಿಂದ ಕುಟ್ಟಬೇಕಾಗುತ್ತದೆ. ಮತ್ತೆ ಅದೇ ಕ್ಷಣದಲ್ಲಿ ಉಗುರುಗಳಿಂದ ಭತ್ತವನ್ನು ಚಿವುಟಿ ಅಕ್ಕಿಯನ್ನು ಹೊರಗೆ ತೆಗೆಯಲು ಆಗುವುದಿಲ್ಲ. ಒಂದು ವೇಳೆ ಉಗುರುನಿಂದ ಕತ್ತರಿಸಿ ಭತ್ತದಿಂದ ಅಕ್ಕಿಯನ್ನು ಹೊರತೆಗೆಯಲೆತ್ನಿಸಿದರೆ ಒನಕೆಯಿಂದ ಕುಟ್ಟುವ ಕ್ರಿಯೆಯು ನಡೆಯುವುದಿಲ್ಲ. ಆದ್ದರಿಂದ ಬೇರೆ ಬೇರೆ ಪಕ್ಷಗಳಲ್ಲಿ ಆ ಕ್ರಿಯೆಯ ಉತ್ಪತ್ತಿಯಾಗುತ್ತದೆ. ಪ್ರಸಕ್ತಿಯಾಗುತ್ತದೆ. ಆದ್ದರಿಂದ "ಅರ್ಥಾಪತ್ತಿ" ಪ್ರಮಾಣದಿಂದ ಅವಘಾತ ಮೊದಲಾದ ವಿಧಾಯಕ ಶ್ರುತಿಯು ಇಲ್ಲದಲ್ಲಿಯು ಕೂಡ ಪ್ರಾಪ್ತಿ ಇರುತ್ತದೆ. ಆದರೆ ಅಪೂರ್ವ ವಿಧಿಯಲ್ಲಿ ಹೀಗೆ ಇರುವುದಿಲ್ಲ. ಇನ್ನೂ ಇದರ ಬಗ್ಗೆ ಬಹಳ ರಹಸ್ಯವಾಗಿ ಬರೆದಿರುತ್ತಾರೆ. ಆದರೆ ಸಂಕ್ಷಿಪ್ತವಾಗಿ ಅವುಗಳ (Introduction) ಅಥವಾ Acquaintance ಪರಿಚಯ ಅಷ್ಟೆ ಎಂದು ತಿಳಿದುಕೊಳ್ಳಬೇಕೆಂದು ಹೇಳುತ್ತಾರೆ.

**"ನಿಯಮವಿಧಿ: ಅನ್ಯನಿವೃತ್ತಿ ಪಲಕ ಸಿದ್ಧವಿಷಯಕವಿಧಿ:",** ಅಂದರೆ ಬೇರೆಯಾಗಿರುವುದನ್ನು ನಿವೃತ್ತಿಮಾಡುವ ಫಲವುಳ್ಳದ್ದು ಮತ್ತು ಸಿದ್ಧವಿಷಯವನ್ನು ತಿಳಿಸುವ ವಿಧಿಯು ನಿಯಮ ವಿಧಿಯಾಗಿರುವುದು.

ಇನ್ನೊಂದು ಸಂಶಯಯುಕ್ತವಾದ ಸಂದರ್ಭದಲ್ಲಿ ಪ್ರಾಪ್ತಿಯಾಗದೆ ಇರುವ ಭಾಗವನ್ನು (Element) ಅಥವಾ Unit ಎಂದು ಹೇಳಿಸಿಕೊಳ್ಳುವ ಅಥವಾ ಪೂರ್ತಿಮಾಡುವ ಅಂದರೆ (Livelong) ವಿಧಿಯು ಹೇಗೆ ಯಾಗಕ್ಕೆ ಅಂಗಸ್ವರೂಪವಾಗಿ ಪ್ರಾಪ್ತವಾಗಿರುವ ಭತ್ತವನ್ನು ಅಕ್ಕಿ ಮಾಡಬೇಕಾಗುತ್ತದೆ. ಈ ಸಂದರ್ಭದಲ್ಲಿ ಉಗುರಿನಿಂದ ಸುಲಿಯುವುದು ಒನಕೆಯಿಂದ ಕುಟ್ಟುವ, ಇವೇ ಎರಡು ಪಕ್ಷಗಳು, ಈ ಎರಡು ಪಕ್ಷಗಳು ಪ್ರಾಪ್ತವಾದಾಗ ಇಲ್ಲಿದೆ ರಹಸ್ಯ ತಿಳಿದುಕೊಳ್ಳಿ. ಒಂದು ಉಗುರಿನಿಂದ ಸುಲಿಯುವದು ಬಂದಾಗ ಒನಕೆಯಿಂದ ಕುಟ್ಟುವದು ನಿಲ್ಲಬೇಕಾಗುತ್ತದೆ (ಅಪ್ರಾಪ್ತವಾಗುತ್ತದೆ). ಅದಕ್ಕೆ ಪೂರಕವಾಗಿರುವ ಭತ್ತವನ್ನು ಕುಟ್ಟಬೇಕೆಂದು ಹೇಳುವುದು ಇದು ನಿಯಮವಿಧಿಯು.

**3. ಪರಿಸಂಖ್ಯಾವಿಧಿ ಪರಿಸಂಖ್ಯಾವಿಧಿ:** ಎರಡು ಶೇಷಗಳಲ್ಲಿ ಅಂದರೆ ಅಂಗಗಳಲ್ಲಿ ಒಂದು ಶೇಷದ ಅಂಗವು ನಿತ್ಯ ಪ್ರಾಪ್ತಿಯಾಗುವುದರಿಂದ ಎರಡನೇ ಶೇಷದ ನಿವೃತ್ತಿಯನ್ನು ಮಾಡುವ ವಿಧಿ ಪರಿಸಂಖ್ಯಾವಿಧಿ ಅಂದರೆ ಪರಿಸಂಖ್ಯಾವಿಧಿಯು ಬಹಳ ಕ್ಲಿಷ್ಟವಾಗಿರುವುದರಿಂದ ಸಂಕ್ಷಿಪ್ತವಾಗಿ ತಿಳಿಯೋಣ.

ಹೇಗೆಂದರೆ, ಎರಡು ಶೇಷ ಅಂದರೆ ಅಶ್ವರಸನಾಗೃಹಣ (ಕುದುರೆಯ ಹಗ್ಗ), ಇನ್ನೊಂದು ರಾಸಭ ರಸನಾಗೃಹಣ (ಕತ್ತೆಯ ಹಗ್ಗದ ಗೃಹಣ), ಈ ಎರಡು ಶೇಷಗಳಲ್ಲಿ ಲಿಂಗ ಪ್ರಮಾಣದಿಂದ "ಇಮಾಮಗೃಹ್ಣನ್" ಇತ್ಯಾದಿ ಶೇಷರೂಪಮಂತ್ರ ನಿತ್ಯಪ್ರಾಪ್ತಿಯಾಗಿರುತ್ತದೆ. ಮತ್ತು ಬೇರೆ ಶೇಷರೂಪವಾದ ಕತ್ತೆಯ ರಸನಾದಗೃಹಣದ ನಿತ್ಯನಿವೃತ್ತಿಯೂ ಆಗುತ್ತದೆ. ಇಮಾಮಗೃಹ್ಣನ್ ಇತ್ಯಾದಿ ಮಂತ್ರಗಳಿಂದ ಅಶ್ವರಸನಾಗೃಹಣವನ್ನು ಮಾಡಬೇಕಾಗುತ್ತದೆ. ಗದರ್ಭರಸನಾದ (ಕತ್ತೆಯರಸನಾದ) ಗ್ರಹಣವನ್ನು ಮಾಡಬಾರದು.

ಪರಿಸಂಖ್ಯಾವಿಧಿ ಒಂದೇ ಸ್ಥಳದಲ್ಲಿ ಎರಡು ವಸ್ತುಗಳು ಪ್ರಾಪ್ತಿಯಾದಾಗ ಮತ್ತೊಂದು ವ್ಯಾವೃತ್ತಿಯನ್ನು ಮಾಡುವುದು ಎಂದು ತಿಳಿಸುವುದೇ ಪರಿಸಂಖ್ಯಾವಿಧಿಯು. ಹೇಗೆಂದರೆ, ಸೋಮಯಾಗ ಮೊದಲಾದವುಗಳ ಯಾಗಕ್ಕೆ ಅಂಗಭೂತವಾಗಿರುವ ಯಾಗಕ್ಕೆ ಬೇಕಾದ ಮುಖ್ಯವಾದ ಪಶುವಿನ ಹಗ್ಗವನ್ನು ಹಿಡಿಯಬೇಕು ಎನ್ನುವುದು ವಿಧಿಯಾಗಿ ಬಂದಾಗ ಯಾಗಕ್ಕೆ ಮುಖ್ಯಭೂತವಾದ ಪ್ರಮುಖವಾದ ವಿಶೇಷದ ಸಲುವಾಗಿ ಕುದುರೆ ಮತ್ತು ಕತ್ತೆ ಎರಡರ ಹಗ್ಗವನ್ನು ಹಿಡಿಯುವ ಸಲುವಾಗಿ ಸಂಶಯ ಬಂದರೆ ಕುದುರೆಯ ಲಗಾಮವನ್ನ ಹಿಡಿಯಬೇಕು ಎಂಬ ವಾಕ್ಯವು ಕತ್ತೆಯ ಹಗ್ಗವನ್ನು (ಕಡಿವಾಣವನ್ನು) ಹಿಡಿಯುವುದನ್ನು ನಿವಾರಿಸುತ್ತದೆ. ಇದುವೇ ಪರಿಸಂಖ್ಯಾ ವಿಧಿಯು.

ಹೀಗೆ "ತವ್ಯ" ಪ್ರತ್ಯೇಯಕ್ಕೆ ವಿಧಿ (ಮಾಡಲೇಬೇಕಾದ ನಿಯಮ) ಎಂದು ಅರ್ಥಮಾಡಿದರೂ, ಅನೇಕರು ಪೂರ್ವಪಕ್ಷ, ಉತ್ತರ ಪಕ್ಷಗಳಲ್ಲಿ ವಾದ ವಿವಾದ, ಶಂಕಾ, ಸಮಾಧಾನಗಳನ್ನು ಮಾಡಲಾಗಿದೆ. ಅಲ್ಲದೆ ಅದ್ವೈತಾಚಾರ್ಯರಾದ ಅನುಭೂತ ಸ್ವರೂಪಚಾರ್ಯರು ಹಾಗೂ ವಾಚಸ್ಪತಿ ಮಿಶ್ರಾಚಾರ್ಯರು. ಮೂರು ವಿಧಿಗಳನ್ನು ಒಪ್ಪಿದ್ದಾರೆ. ಕೊನೆಗೆ ಈ ವಿಧಿಗಳನ್ನು ಕುರಿತು ಏನು ನಿರ್ಣಯ ಮಾಡುತ್ತಾರೆಂಬುದನ್ನು ತಿಳಿಯುವುದು ಬಹುಮುಖ್ಯ.

ತಾತ್ಪರ್ಯವೇನಂದರೆ, "ಆತ್ಮೇತ್ಯೇವೋಪಾಸೀತ" (ಆತ್ಮನ ಉಪಾಸನೆ ಮಾಡು) ಇತ್ಯಾದಿ ವಿಧಿಯು ಕೇಳಿಬಂದಾಗಲಾದರೂ ಇಲ್ಲಿ ವೇದಾಂತ ವಿಧಾಯಕವೆಂದು ಅಂಗೀಕರಿಸಬೇಕು. ಇದನ್ನು ಹುಚ್ಚಮನುಷ್ಯನನ್ನು ಕುರಿತು ಹೇಳಿದ್ದಾಗಿದೆ ಎಂದು ಅನ್ನಲಾಗದು. ಏಕೆಂದರೆ ಸಂಪ್ರದಾಯಿಕ ಸಮಾನವಿದೆ. ಆದ್ದರಿಂದ ವಿಧೇಯ ಅರ್ಥದಲ್ಲಿರುತ್ತದೆ. "ತದ್ವಿಷಯಾಲಿಂಗಾದಯ:" ಒಂದು ವೇಳೆ ಲಿಂಗ, ಆದಿ ಎಂದು ಕೇಳಿಬರುತ್ತದೆ ಎಂದರೆ, ಆದರೂ ಇದು ವಿಧಿವಿಷಯಕವಲ್ಲ, ಅನ್ಯರೂಪ ಪ್ರಮಾಣ್ಯ ಪ್ರಸಕ್ತವಾಗುವದು. ಏಕೆಂದರೆ ಹೇಯ ಮತ್ತು ಉಪಾದೇಯದಲ್ಲಿ ವಿಧಿ ಎನಿಸುತ್ತದೆ.

ಅದರಲ್ಲಿ ಪುರುಷನ ಅದೇ ಉಪಾದೇಯ, ಹೇಯವಾಗುತ್ತದೆಯೋ ಪ್ರಮಾಣ ಪ್ರಾರಂಭವಾಗುತ್ತದೆ. ಅದರಲ್ಲಿಯೇ ನಿಯೋಜ್ಯ ಮಾಡಲ್ಪಟ್ಟ ಅಧಿಕಾರಿ ಸಮರ್ಥನಾಗುತ್ತಾನೆ. ಆದರೆ ಆತ್ಮನ ಶ್ರವಣ, ಮನನ, ಅಲ್ಲದೆ ನಿಧಿಧ್ಯಾಸನಾದಿಗಳು ಅದರಂತೆ ಅಲ್ಲ. ವಿಧಿ ವ್ಯಾಪಕ ವಿಷಯ ಮತ್ತು ಅನುಷ್ಠಾನತೆಯ ಅಭಾವವಾಗುವುದರಿಂದ, ಲಿಂಗಾದಿಗಳ ಪ್ರಯುಕ್ತವಾದರೂ ಕೂಡ, ಪ್ರವರ್ತನೆಯಲ್ಲಿ ಅಸಮರ್ಥವಾಗುತ್ತದೆ. ಹೇಗೆಂದರೆ ಕಲ್ಲಿನ ಮೇಲೆ ಪ್ರಯುಕ್ತವಾದ ಚೂರಿಯ ತೀಕ್ಷ್ಣತೆಯಂತೆ ಕುಂಠಿತವಾಗುತ್ತದೆ. ಚೂರಿಯು ಎಷ್ಟೇ ಹರಿತ, ಸೂಕ್ಷ್ಮವಾಗಿದ್ದರೂ ಕಲ್ಲಿನ ಕಠಿಣತ್ವದ ಮುಂದೆ ಅದರ ಆಟ ನಡೆಯುವದಿಲ್ಲ. ಅದು ಪ್ರಮಾಣವಾಗುತ್ತದೆ. ಯಾವನು (ಯಾವುದು) ಸಮರ್ಥವಾಗಿದೆಯೋ, ಅದುವೇ ಕರ್ತೃ, ಅವನೇ ಅಧಿಕಾರಿಯಾಗುತ್ತಾನೆ. ಸಾಮರ್ಥ್ಯದ ಅಭಾವವೆಂದರೆ ಕರ್ತೃವೂ ಅಲ್ಲ ಮತ್ತು ಅಧಿಕಾರಿಯೂ ಅಲ್ಲ.

ಒಂದು ವೇಳೆ ವಿಧಿ ಆಗದಿದ್ದಲ್ಲಿ, ವಿಧವಚನ ಅಲ್ಲದಿದ್ದಲ್ಲಿ ಈ ವಚನವು ವಿಧಿ ಸದೃಶ ಮಂಕಾಗಿರುತ್ತವೆ. ಅಂದರೆ "ಕಿಮರ್ಥಾನಿ" ಎನ್ನುವ ಮೊದಲಾದ ವಾಕ್ಯಗಳಿಂದ ಉಪದೇಶ ಮಾಡುವ ಪ್ರಮೇಯ, ಏಕೆಂದರೆ, ವಿಧಿ ವಾಕ್ಯ ಅನರ್ಥಕವಾಗುವುದಾದರೆ, ಸ್ವಾಧ್ಯಾಯವಿಧಿ ಎಂಬ ಗೃಹಣವಾಗುತ್ತಿರಲಿಲ್ಲ. ಆದ್ದರಿಂದ ವಿಧಿ ಎಂಬ ವಾಕ್ಯವು ಅನರ್ಥಕವೂ ಅಲ್ಲ, ಅದರ ತ್ಯಾಗವೂ ಅಲ್ಲ, ಸ್ವಾಧ್ಯಾಯರೂಪ ವಿಧಿಯಾಗಿ ಸಾರ್ಥಕವಾಗಿದೆ. "ಸ್ವಾಭಾವಿವೇಕೇತಿ" ಅಂದರೆ ಅನ್ಯಸ್ಯ ಪ್ರಾಪ್ತಿಯಾಗುವ ಕಾರಣ ಶ್ರವಣಾದಿಗಳು ವಿಧಿಯ ಸಮಾನವಾಗಿ ವಾಕ್ಯಗಳಿಂದ ಕಂಡುಬಂದರೂ ಅದು ವಿಧಿ ಅಲ್ಲ. ವಿಧಿವಾಕ್ಯ ರೂಪದಲ್ಲಿ ಅನುವಾದ ಮಾಡಲಾಗಿದೆ. ಏಕೆಂದರೇ ಇದರದೊಂದು ಪ್ರಯೋಜನವಿದೆ. ಪ್ರವೃತ್ತಿಯನ್ನುಂಟು ಮಾಡುವುದೇ ಶ್ರವಣಾದಿಗಳಲ್ಲಿ ಪ್ರಯೋಜನವಿದೆ. ಹೇಗೆಂದರೆ, ಮನುಷ್ಯನ ಅಪೇಕ್ಷೆ ಹೀಗಿದೆ. ಇಷ್ಟ ಮತ್ತು ಅನಿಷ್ಟ ವಸ್ತುಗಳ ಪ್ರಾಪ್ತಿ

ಮತ್ತು ಪರಿಹಾರಗಳ ಬಗ್ಗೆ ಆಸಕ್ತಿ ಇರುತ್ತದೆ. ಇಷ್ಟವು (ಸುಖ) ಪ್ರಾಪ್ತಿಯಾಗಲಿ, ಅನಿಷ್ಟ (ದು:ಖವು ಪರಿಹಾರವಾಗಲಿ ಎಂದು ಮನಸ್ಸು ಯಾರದ್ದು ಆದಲ್ಲಿ ಅಂಟಿಕೊಂಡಿರುತ್ತದೆಯೋ ಅಂತಹ ಬಹಿರ್ಮುಖ ಪುರುಷನು ಒಳಗಿರುವ ಆತ್ಮನ ಕಡೆ ತನ್ನ ಚಿತ್ತಿನ ವೃತ್ತಿಯನ್ನು ಅಂತರ್ಮುಖ ಮಾಡಲಾಗುವುದಿಲ್ಲ. ಆದರೆ ಆತ್ಮನ ವಿಧಾಯಕ ಸದೃಶ ವಾಕ್ಯಗಳಿಂದ ಮನಸ್ಸಿನ ವಿಷಯವೃತ್ತಿಯನ್ನು ನಿವೃತ್ತಿ (ಪರಿಹಾರ) ಮಾಡಿಕೊಂಡು ಪ್ರತ್ಯಗಾತ್ಮನಲ್ಲಿ ಮಾನಸಿಕ ವೃತ್ತಿಯ ಪ್ರವಾಹವನ್ನು ಅನಾವರಣ ಮಾಡುತ್ತಾನೆ. ಆದ್ದರಿಂದ ಪ್ರವೃತ್ತಿ ವಿಶೇಷತೆಯು ಅನುವಾದ ವಾಕ್ಯಗಳಲ್ಲಿರುತ್ತವೆ. ಕಾರಣ ಅವುಗಳ (ಶ್ರವಣಾದಿಗಳ) ಪ್ರಯೋಜನವಾಗುವುದರಿಂದ ಸ್ವಾಧ್ಯಾಯ ವಿಧಿಯಿಂದ ಗ್ರಹಣ ಉತ್ಪನ್ನವಾಗಿರುವುದು.

ಇನ್ನು ಇವುಗಳ ಬಗ್ಗೆ ಬಹಳ ಊಹಾಪೋಹ ಶಂಕಾ, ಸಮಾಧಾನಗಳು ಅತಿಕಠಿಣತರದಿಂದ ಸಂಕ್ಷೇಪ ಶಾರೀರಿಕಕಾರರು, ಭಾಷ್ಯಕಾರರು, ವಾಚಸ್ಪತಿ ಮಿಶ್ರರು, ಅನುಭೂತಾತ್ಮ ಸ್ವರೂಪಾಚಾರ್ಯರು, ಇನ್ನೂ ಅನೇಕ ಜನರು ಚಿಂತನ ಮಾಡಿದ್ದಾರೆ. ಶ್ರವಣ, ಮನನ, ನಿಧಿಧ್ಯಾಸನಾದಿಗಳು ಜ್ಞಾನಕ್ಕೆ ಬೀಜರೂಪಗಳಾಗಿವೆ. ಏಕೆಂದರೆ ಪ್ರಾಪ್ತಿಯಾದ ಪ್ರಾಪ್ಯಪ್ರಾಪ್ತಿಯಾದ ಆತ್ಮನ ಪ್ರಾಪ್ತಿಗೆ ಸಾಧನಗಳಾಗಿವೆ. ಅಲ್ಲದೆ ಇವುಗಳು ಜ್ಞಾನದ ಸ್ವರೂಪವೇ ಆಗಿವೆ.

> ಶ್ರವಣಮ್ : ಉಪಕ್ರಮಾದಿಭಿ: ಷಡ್ಬಿ: ಲಿಂಗೈ: ವೇದಾಂತಾನಾಂ ಅದ್ವಿತೀಯೇ ಬ್ರಹ್ಮಣಿ ತಾತ್ಪರ್ಯ ಅವಧಾರಣಂ ಇತಿ ಆದರ್ಶೆ

ಅರ್ಥ : 1 ಉಪಕ್ರಮ, (ಉಪಸಂಹಾರ) 2 ಅಭ್ಯಾಸ, 3 ಅಪೂರ್ವತೆ, 4 ಫಲ 5 ಅರ್ಥವಾದ, 6 ಉಪತ್ತಿ ಎಂಬ ಆರು ಲಿಂಗಗಳಿಗುಣವಾಗಿ ಮಾಡುವವ ಶ್ರವಣ. ಅಂದರೆ ಆರು ಲಿಂಗಗಳಿಗೆ ಏನು ತಾತ್ಪರ್ಯವೆಂದರೆ ಸಮಸ್ತ ಉಪನಿಷತ್ತುಗಳಿಂದ ತಿಳಿದು ಬರುವದೇ ಅದ್ವೈತ ಬ್ರಹ್ಮದ ರಹಸ್ಯ, ಅಂದರೆ ಬ್ರಹ್ಮದಲ್ಲಿಯೇ ತಾತ್ಪರ್ಯವಿದೆ "ಸರ್ವವೇದಾದ: ಯತ್ಪದಮಾಮನಂತೆ" ಎಂಬುವುದಕ್ಕೆ ಎಲ್ಲ ವೇದಗಳು ಬ್ರಹ್ಮವನ್ನೆ ಕುರಿತು ಉಪದೇಶ ಮಾಡುತ್ತವೆ. ಅದು ಸಗುಣ ಇರಬಹುದು ಅಥವಾ ನಿರ್ಗುಣವಿರಬಹುದು. ಬ್ರಹ್ಮವನ್ನೆ ? ಕುರಿತು ಪ್ರವಹಿಸುತ್ತವೆ. ಬ್ರಹ್ಮದ ನಿಶ್ಚಯವೇ ಅವುಗಳ (ಲಿಂಗಗಳ ಶ್ರುತಿಗಳ) ತಾತ್ಪರ್ಯವಾಗಿದೆ.

> ವಿವಿಧವೆನಿಸುವ ವಾಕ್ಯಗಳಿಗೆ ಹವಣಿಸಿದಾರುತೆರದಲಿಂಗಂಗಳ
> ನವಿರವರಿಯಲು ಪರಮಾತ್ಮರಿಗೈಕ್ಯವೇ ತಾತ್ಪರ್ಯವಿದು
> ಭುವನೋತ್ತಮೆಂಥವದರಿಪುದೆ ಶ್ರವಣವಿದಾನಾರೆಂಬುದನೊಂದಿ
> ಸುವಿಚಾರಿಸಲಿಯದ ಮೂಲಜ್ಞಾನವನೆ ಕೆಡಿಸುತಿಹುದು. ॥೧॥

ನಿಜಗುಣರು ಹೇಳಿದ ಈ ಮೇಲಿನ ವಾಕ್ಯದ ಅರ್ಥವನ್ನು ಉಪನಿಷದರ್ಥದಲ್ಲಿ, ಲಿಂಗನಿರ್ಣಯದಲ್ಲಿ ಕಂಡು ತಿಳಿದಿದ್ದೇವೆ. ಇದರ ಬಗ್ಗೆ ವಿಸ್ತರಿಸುವ ಅವಶ್ಯಕತೆ ಇಲ್ಲವೆನಿಸುತ್ತದೆ. ಶ್ರೀಮನ್ನಿಜಗುಣರು ಜ್ಞಾನಪ್ರತಿಪಾದನ ಸ್ಥಳದಲ್ಲಿ, "ಸುಮ್ಮನಾಗದು ವಿಧಿಯೊಳಂದದೆ ಮುಕ್ತಿ" ಎಂಬ ವಚನವನ್ನು ಇದೆ ಭಾವನೆಯಿಂದ ಹೇಳಿದ್ದಾರೆ. ಮತ್ತೆ ಇನ್ನೂ ಒಂದು ಕಡೆ ನಿಜಗುಣರು ಸ್ವಾರಸ್ಯವಾಗಿ ನಿರೂಪಣೆ ಮಾಡಿದ್ದಾರೆ.

> ಶ್ರವಣಾಧಿ ಶಬ್ದಾದಿಗಳನು ವಿಕರ್ಮಾದಿ ।
> ತ್ರಿವಿಧಾವ ಗತಿಯೊಳರಿಯೆ ಮುಕ್ತಿ ॥೧॥

ಶ್ರವಣ, ಮನನ, ನಿಧಿಧ್ಯಾಸನ, ಶಬ್ದಾದಿ ಪ್ರಮಾಣಗಳ ಕರ್ಮಕಾಂಡ, ಉಪಾಸನಾಕಾಂಡ, ಜ್ಞಾನಕಾಂಡಗಳನ್ನು ಚೆನ್ನಾಗಿ, ಅವುಗಳು ಯಾವ ಭಾವದಲ್ಲಿ ಅರ್ಥೈಸಿರುವವೋ ಹಾಗೆ ತಿಳಿದುಕೊಂಡರೆ ಮುಕ್ತಿಯಾಗುತ್ತದೆ. ಭಾವ ಬದಲಾವಣೆಯಾದರೆ ಅರ್ಥ ಅನರ್ಥವಾಗುತ್ತದೆ. ಕಾರಣ ಲೌಕಿಕದಲ್ಲಿ ಬೇನೆ ಒಂದುಕಡೆ, ಬರೆ ಒಂದುಕಡೆ ಆದರೆ ರೋಗ ವಾಸಿಯಾಗುವುದಿಲ್ಲ ಎನ್ನುತ್ತಾರೆ. ಆದ್ದರಿಂದ ಇವುಗಳೆಲ್ಲವೂ ಕರ್ಮರೂಪವಾಗಿ ಹೊರತೋರಿಕೆಗೆ ಕಂಡರೂ ಅಂತರ್ವಿಚಾರಕ್ಕೆ ಜ್ಞಾನ ಸ್ವರೂಪಗಳೆ. ಏಕೆಂದರೆ ಇವೆಲ್ಲಾ ಜ್ಞಾನಕಾಂಡದೊಳಗಿನ, ಕರ್ಮ, ಉಪಾಸನ, ಜ್ಞಾನವೆಂದು ತಿಳಿಯಬೇಕು. ಕೇವಲ ಕ್ರಿಯೆ ಬೇರೆ, ಸುವಿಚಾರ ಕ್ರಿಯೆ ಬೇರೆ, ಅದನ್ನೇ ನಿಜಗುಣರು ಕೆಳಗಿನ ಪದ್ಯವಿಭಾಗದಲ್ಲಿ ಹೀಗೆ ಹೇಳುತ್ತಾರೆ.

> ಅರಿವಿನೊಳುಕೂಡಿ ತನ್ನನು ವಿಚಾರಿಸುವಾಗಳರಿವುಮಾ ಸುವಿ
> ಚಾರ ಕ್ರಿಯೆಯದು ॥೨॥

ಅಂದರೆ, ಇದು ಕೇವಲ ಕ್ರಿಯೆ (ಕರ್ಮ) ಅಲ್ಲಿ ಸುವಿಚಾರಕ್ರಿಯೆ ತನ್ನ ವಿಚಾರಿಸುವ ಕರ್ಮ ಜ್ಞಾನಕರ್ಮ ಸುವಿಚಾರ ಕ್ರಿಯೆ, ಇದು ಬಂಧನವಲ್ಲವೆಂದು ಹೇಳುತ್ತಾ ಮತ್ತೊಬ್ಬ ಮಹಾನುಭಾವರು–

> ತತ್ಕರ್ಮ ಯನ್ನಬಂಧಾಯ ಸಾವಿದ್ಯಾಯಾವಿಮುಕ್ತಯೇ ।
> ಆಯಾಸಾಯಪರಂ ಕರ್ಮ ವಿದ್ಯಾನ್ಯ ಶಿಲ್ಪನೈಪುಣಮ್ ॥೩॥

ಸರಿಯಾದ ಕರ್ಮ ಯಾವುದು. ಸಕಲ ವಿದ್ಯೆಗಳಲ್ಲಿ ಯಾವುದು ಯೋಗ್ಯವಿದ್ಯಾ ಎನ್ನುವುದರ ಬಗ್ಗೆ ಹೇಳುತ್ತಾರೆ. ಯಾವುದರಿಂದ ಮನುಷ್ಯನಿಗೆ ಬಂಧನವಾಗುವುದಿಲ್ಲವೋ, ಅದೇ ಸುವಿಚಾರ ಕರ್ಮ, ಸರಿಯಾದ ಕರ್ಮವು ಕಟ್ಟಿಹಾಕುವಗಳೆಲ್ಲ, ಬಂಧನಮಾಡಿ ದು:ಖ ಕೊಡುವವುಗಳೆಲ್ಲಾ ಕರ್ಮಗಳಲ್ಲ. ಇನ್ನು ಯಾವುದು ಬಿಡುಗಡೆಗೆ ಮೋಕ್ಷಕ್ಕೆ ಸಾಧನವೋ ಅದುವೇ ಸಕಲ ವಿದ್ಯೆಗಳ ರಾಜ, ಕರ್ಮ, ಉಳಿದ ವಿದ್ಯೆಗಳಿಂದ ಕರ್ಮಗಳಿಂದ ಕೇವಲ ಆಯಾಸವಾಗುತ್ತದೆ. ಕೇವಲ ಕಲಾನೈಪುಣ್ಯತೆ ಅದುವೇ ಯೋಗ್ಯವಿದ್ಯಾ ಉಳಿದ ಕಲಾಕುಶಲವೆಂದು ತಿಳಿಯಬೇಕು. ಆದ್ದರಿಂದ ಶ್ರವಣಾದಿಗಳು ವಿಧಿ, ನಿಯಮ, ಕರ್ಮ ಮೊದಲಾದ ರೂಪದಲ್ಲಿ ತೋರಿದರೂ ಅವುಗಳು ಉಳಿದವುಗಳಂತೆ, ಅಂದರೆ ಕರ್ಮ ಮತ್ತು ವಿಧಿಗಳಂತೆ ಅಲ್ಲ. ಶ್ರವಣ ಇನ್ನೊಂದು ಬಹುಮುಖ್ಯ ಲಕ್ಷಣವನ್ನು ಅವಲೋಕಿಸಿರಿ.

> ಶ್ರವಣಮ್ : ಶ್ರೋತ್ರಿಯ ಬ್ರಹ್ಮನಿಷ್ಠಗುರು ಮುಖಾತ್ ಶ್ರುತಿವಾಕ್ಯರ್ಥವಿಜ್ಞಾನಮ್ ॥೧॥

**ಅರ್ಥ** : ಶ್ರೋತ್ರಿಯ ಬ್ರಹ್ಮನಿಷ್ಠ ಗುರುಗಳಿಂದ, ಶ್ರುತಿವಾಕ್ಯವನ್ನು, ಅಂದರೆ ತತ್ವಮಸಿ, ಪ್ರಜ್ಞಾನಂ ಬ್ರಹ್ಮ, ಅಹಂ ಬ್ರಹ್ಮಾಸ್ಮಿ, ಅಯಮಾತ್ಮಾಬ್ರಹ್ಮ, ಈ ಎಲ್ಲಾ 4 ಮಹಾವಾಕ್ಯಗಳು ಬರುವ ಶ್ರುತಿಗಳನ್ನು ಅರ್ಥಾಕಾರವಾಗಿ ಶ್ರವಣ ಮಾಡುವುದೇ ಮಹತ್ವ ರೂಪವಾದ ಶ್ರವಣವು, ಇದನ್ನರಿತೆ ಶ್ರುತಿವಾಕ್ಯವಿಂತಿದೆ.

> "ಆಸುಪ್ತರುತ್ಥಾಯ ಸುಪ್ತ್ಯಂತಂ ಬ್ರಹ್ಮೈಕ ಪ್ರವಿಚಿಂತಿತಾಂ"॥೨॥

ಅರ್ಥ : ನಿದ್ರೆಯಿಂದ ಎಚ್ಚರಾದ ಮನುಷ್ಯನು ಪುನಃ ನಿದ್ರೆಗೆ ಹೋಗುವ ನಡುವಿನ ಇಡಿ ಸಮಯವನ್ನು ಬ್ರಹ್ಮ ಚಿಂತನೆಯಲ್ಲಿಯೇ ಕಳೆಯಬೇಕು ಎನ್ನುತ್ತಾರೆ. ಅದ್ವೈತ ಶಿಖಾಮಣಿ ಜಗದ್ಗುರು ಶಂಕರಾಚಾರ್ಯರು ಯಾವುದನ್ನು ಕೇಳಬೇಕು ಎಂಬುದಕ್ಕೆ ಸುಮಧುರವಾದ ಉತ್ತರವನ್ನು ನೀಡಿದ್ದಾರೆ ಕೇಳಿರಿ.

ಶೋತವ್ಯಾಶ್ರಾವ್ಯರೂಪಾದೌ ಪದಾರ್ಥೌ ಸುಖದು:ಖದೌ
ಶೋತವ್ಯಂ ಬ್ರಹ್ಮನೈವಾನ್ಯಥ್ ಇತಿವೇದಾಂತಡಿಂಡಿಮ: ॥೩॥

ಇದು ವೇದಾಂತ ಡಂಗುರ. ಇದನ್ನು ಲಕ್ಷ್ಯವಹಿಸಿ ಕೇಳಿದವನಿಗಲ್ಲ ಆಡಂಬರ, ಅವನೆಂದೆಂದೂ ನಿರಾಡಂಬರ, ಡಂಬಾಚಾರವನ್ನು ಸುಡುವಡಂಗುರ. ವಿಚಾರಿಸಿ ಈ ಜಗತ್ತಿನಲ್ಲಿ ಎರಡೇ ಎರಡು ಪದಾರ್ಥಗಳು (ವಿಷಯಗಳು) ಒಂದು ಕೇಳೋದು, ಒಂದು ಕೇಳದೆ ಇರೋದು ಕೇಳುವುದಾವುದೆಂದರೆ ಕೇವಲ ಪರಬ್ರಹ್ಮ, ಪರಮಾತ್ಮ ತತ್ವವನ್ನೆ ಕೇಳುವುದು ಯೋಗ್ಯವಾದದ್ದು. ಇನ್ನೊಂದು ಕೇಳಲಿಕ್ಕೆ ಅಯೋಗ್ಯವಾದ ವಿಷಯ ಪ್ರಪಂಚ. ಇದನ್ನು ಕೇಳಲೇಬಾರದು. ಏಕೆಂದರೆ ಬ್ರಹ್ಮಭಿನ್ನವಾದ ಅನ್ಯವನ್ನು ಕೇಳಲೇಬಾರದೆಂದು ಶ್ಲೋಕದಲ್ಲಿ ಹೇಳಿದ್ದಾರೆ. ಅಂದಮೇಲೆ ಹೇಯ ಮತ್ತು ತ್ಯಾಗಕ್ಕೆ ಯೋಗ್ಯವಾದ ಪದಾರ್ಥದ ಬಗ್ಗೆ ಕೇಳದಿರುವುದೇ ಯೋಗ್ಯವೆಂದಂತಾಯಿತು. ಇಲ್ಲಿ ಒಂದು ಸಂಶಯ, ಏನೆಂದರೆ ಕೇಳಬೇಕಾಗಿರದ್ದರ ಬಗ್ಗೆ ಬೇಡವೆಂದರೆ ಬಿಡುತ್ತೇವೆ ಆದರೆ ಅದರಿಂದಾಗುವ ಹಾನಿಯೇನು, ಕೇಳಿದುದನ್ನು ಕೇಳಿದರೆ ಫಲವೇನು? ಕೇಳಲಯೋಗ್ಯವಾದುದನ್ನು ಕೇಳಿದುದಕ್ಕೆ ಫಲವೇನು? ಯಾವಾಗಲೂ ಕೇಳಬೇಕಾದ ಬ್ರಹ್ಮದ ಬಗ್ಗೆ ಕೇಳಿದರೆ ಅತ್ಯಂತ ದು:ಖವು ನಿವೃತ್ತಿಯಾಗಿ ಎಂದಿಗೂ ನಿನ್ನಿಂದಗಲದ ಪರಮ ಸುಖ(ಮೋಕ್ಷ)ದ ಪ್ರಾಪ್ತಿಯೇ ಫಲವಾಗುತ್ತದೆ.

ಇನ್ನು ಎರಡನೆಯದಾದ ಕೇಳಬಾರದ್ದನ್ನು ಕೇಳಿದರೆ ಇರುಳು ಕಂಡ ಭಾವಿಯನ್ನು ಮಧ್ಯಾಹ್ನ ಒಂದು ಗಂಟೆಯ ಪ್ರಚಂಡ ಮಾರ್ತಂಡನ ಕಿರಣಗಳಿಂದ ತುಂಬಿದ ಬೆಳಕಿನಲ್ಲಿ ಕಂಡು ಕಂಡು ಒಳಗೆ (ಬಾವಿಯನ್ನು) ಬಿದ್ದಂತಾಗುತ್ತದೆ. ಅಂದರೆ ಈ ಪ್ರಪಂಚದ ಬಗ್ಗೆ ತಿಳಿಯಲೆತ್ನಿಸಿ ಹೋಗಿ ಸಂಸಾರದ ದು:ಖ ಕೂಪದಲ್ಲಿ ಬಿದ್ದವರಿಗೆ ಅಕ್ಷಯ (ಆಚಂದ್ರತಾರಕ) ನರಕರೂಪ ದು:ಖವೇ ಫಲವಿರುತ್ತದೆ ಎನ್ನುತ್ತಾರೆ. ಶ್ರೀಮನ್ನಿಜಗುಣರು ಜ್ಞಾನಕ್ಕೆ ಬೀಜ, ರೂಪ, ಕಾರ್ಯವನ್ನು ವಿವರಿಸುವಾಗ ಮುಖ್ಯವಾಗಿ ಶ್ರವಣಾದಿಕವೇ ಬೀಜವೆಂದಿದ್ದಾರೆ. ಶ್ರವಣ, ಮನನ, ನಿಧಿಧ್ಯಾಸನಗಳೇ ಬೀಜ (ಕಾರಣವೆಂದು) ಎಂದು ಸ್ಪಷ್ಟ ಪಡಿಸಿರುವರು. ಇನ್ನೊಂದು ಕಡೆ ಶ್ರೀಮನ್ನಿಜಗುಣರು ಹೇಳುತ್ತಾರೆ ಕೇಳಿರಿ ಹರುಷ ಹೊಂದಿರಿ "ಶ್ರವಣ ಮನನ ನಿದಿಧ್ಯಾಸನವಿಲ್ಲದೆ ಭವಬಂದವಳಿಯದು ತನಗೆಂದು" ಜನನ, ಮರಣ ರೂಪ ಭವಬಂಧನವು ತನಗೆಂದೂ ಅಳಿಯಲು ಸಾಧ್ಯವಿಲ್ಲವೆನ್ನುತ್ತಾರೆ. ಶ್ರವಣ ಎಷ್ಟು ಪ್ರಕಾರ ಶ್ರವಣದಿಂದಾಗುವ ಮುಖ್ಯ ಪ್ರಯೋಜನವೇನೆಂದು ತಿಳಿದುಕೊಳ್ಳುವದು ಅತ್ಯಾವಶ್ಯಕ.

ಶ್ರವಣವು ಎರಡು ಪ್ರಕಾರ :- 1 ಅಂಗಿ, 2 ಅಂಗ, ಅಂಗಿ ಎಂದರೇನು? ಅಂಗಿ ಶ್ರವಣವು ಏನಾಗಿದೆ ಮೊದಲು ನೋಡೋಣ.

**ಅಂಗಿ :** ವೇದಾಂತ ವಾಕ್ಯಕ್ಕು ಶ್ರೋತ್ರಸಂಯೋಗ ಶ್ರವಣ "ಅಂಗಿ", ಉಪಕಾರ್ಯ, ವೇದ ವಾಕ್ಯರೂಪವಾದ ತತ್ತ್ವಮಸ್ಯಾದಿ ವಾಕ್ಯಗಳು ಶ್ರೋತ್ರಕ್ಕೆ ಸಂಬಂಧವಾಗಲು ಅಥವಾ ವೇದಾಂತ ವಾಕ್ಯಗಳಿಗೆ ಶ್ರೋತ್ರದ ಸಂಯೋಗ ಸಂಬಂಧವಾಗಲು ಇದಕ್ಕೆ ಅಂಗಿ ಎಂದು ಕರೆಯುತ್ತಾರೆ. ಇದು ಎರಡನೆ ಶ್ರವಣಕ್ಕೆ ಉಪಕಾರ್ಯವಾಗಿದೆ.

**ಅಂಗ :** ವೇದಾಂತ ವಾಕ್ಯಕ್ಕು ವಿಚಾರರೂಪ ಶ್ರವಣವು ಅಂಗವೆಂದು ಹೇಳಿಸಿಕೊಳ್ಳುತ್ತದೆ. ಅಂದರೆ ವೇದ ವಾಕ್ಯಗಳನ್ನು ವಿಚಾರಪೂರ್ವಕವಾಗಿ ಶ್ರವಣ ಮಾಡಿದರೆ ಅದು ಅಂಗ, ಇದು ಶ್ರವಣವು "ಆನಾರೆಂಬುದನೊಂದಿ ಸುವಿಚಾರಿಸಲಿಯದ ಮೂಲ ಅಜ್ಞಾನವನೇ ಕೆಡಿಸುವದು," ಅಂದರೆ ಪ್ರತಿಯೊಬ್ಬ ಜೀವಿಗೆ ನಾನಾರೆಂದು ವಿಚಾರ ಮಾಡಲಿಕ್ಕೆ ಅವಕಾಶವನ್ನು ಕೊಡದೆ ತನ್ನ ಕಪಿಮುಷ್ಟಿಯಲ್ಲಿ ಹಿಡಿದು, ನರ, ನಾಗ, ಏವತಾದಿಗಳವರೆಗೂ ಎಲ್ಲರನ್ನೂ ಆಟವಾಡಿಸುವ ಮೂಲ ಅಜ್ಞಾನವನ್ನೇ ಕೆಡಿಸುತ್ತದೆ. ಆದ್ದರಿಂದ ಇಂಥ ಶ್ರವಣವೂ ವಿಧಿಯೋ, ನಿಯಮವೋ, ಕರ್ಮವೋ, ಕರ್ತವ್ಯವೋ ಏನೆಲ್ಲಾ ವಿಚಾರಗಳನ್ನು ಬಿಟ್ಟು ಪುರುಷ ಪ್ರವೃತ್ತಿರೂಪವಾದ ಆತ್ಮ ಸಾಕ್ಷಾತ್ಕಾರಕ್ಕೆ ಬೀಜರೂಪವಾದ ಶ್ರವಣವನ್ನು ಅಧಿಕಾರಿ ಪುರುಷ ಮಾಡಲೇಬೇಕು. ಆತನು ಮಾಡೇ ಮಾಡುತ್ತಾನೆ ಎಂದು ಎಲ್ಲಾ ಅದ್ವೈತಾಚಾರ್ಯರು ಶಂಕೆ ಸಮಾಧಾನಗಳಿಂದ ಒಡಂಬಟ್ಟಿದ್ದಾರೆ ಎಂದು ತಿಳಿದು ಅವರ ಮಾರ್ಗನುಯಾಯಿಗಳಾಗಿ ಶ್ರವಣವನ್ನು ಮಾಡುವುದು ಉತ್ತಮವಾಗಿದೆ.

ಇನ್ನು ಮನನವೆಂದರೇನು ಸಂಕ್ಷೀಪ್ತವಾಗಿ ತಿಳಿಯೋಣ ಬನ್ನಿರಿ. ಮನನ ಅಂದರೆ ಅದೇ ಶ್ರುತಿವಾಕ್ಯವನ್ನು ಕೇಳಿ ಬಂದಿದ್ದೇವೆ. "ಮಂತವ್ಯಃ" ಎಂದು. ಮಂತವ್ಯ ಅಂದರೆ ಮಂಥನ ಕೇಳಿದರ್ಥಂಗಳನ್ನು ಸ್ಮರಣೆ ಮಾಡುವದು. ಚಿಂತನೆ ಮಾಡುವದು. "ಕೇಳಿದರ್ಥಂಗಳಂ ನಿನ್ನೊಳೆಕಾಗ್ರದಿಂ। ದಾಳೋಚನಂ ಗೈತಿರಬೇಹುದು" ಗುರುಮುಖದಿಂದ ಬರುವ ವಾಕ್ಯವನ್ನು ಅರ್ಥಸಹಿತವಾಗಿ ಕೇಳಿ ನಂತರ ಏಕಾಗ್ರ ಮನಸ್ಸಿನಿಂದ ಅಂತಕರಣದಲ್ಲಿ ಆಲೋಚನೆಯನ್ನು ಮಾಡುವುದೇ ಮನನವೆನ್ನುತ್ತಾರೆ. ಒಂದು ವೇಳೆ ಕೇಳಿ ಮನನವನ್ನು ಮಾಡದೆ ಇದ್ದರೆ ಎಲ್ಲವೂ ವ್ಯರ್ಥ ನಿಷ್ಪಲವಾಗುವದು. ಇದಕ್ಕೆ ನಿಜಗುಣರು ಒಂದು ದೃಷ್ಟಾಂತವನ್ನು ಕೊಟ್ಟಿದ್ದಾರೆ. ಒಬ್ಬ ಹೆಣ್ಣುಮಗಳು ಕಷ್ಟಪಟ್ಟು ಗೋವನ್ನು ಸಾಕಿ ಅದಕ್ಕೆ ಹುಲ್ಲು ಮೇಯಿಸಿ, ಹಾಲನ್ನು ಕರೆದು ಅತಿಕಷ್ಟಪಟ್ಟು ಕಾಯಿಸಿ, ಅರೆಗಾವು ನೋಡಿ ಹೆಪ್ಪು ಹಾಕಿ, ಮೊಸರು ಮಾಡಿ ಕಷ್ಟಪಟ್ಟು ಮೊಸರ ಹೊಸೆದು (ಕಡೆದು) ಬೆಣ್ಣೆಯನ್ನು ಮಾಡಿ ಅದನ್ನು ಜಾಗ್ರತೆವಹಿಸಿ ಕಾಯಿಸಿ ತುಪ್ಪವನ್ನು ಮಾಡಿ, ಅದನ್ನು ಮೃಷ್ಟಾನ್ನದಲ್ಲಿ ಉಪಯೋಗಿಸಿ ಹೊಟ್ಟೆಗೆ ತಿನ್ನದ ಬಲಾದಿಯೊಳು ಸುರುವಿದರೆ, ಎಷ್ಟು ಅನ್ಯಾಯವೋ ಎಷ್ಟು ವ್ಯರ್ಥವೋ ಹಾಗಾಗುತ್ತದೆ ಎನ್ನುತ್ತಾರೆ. ಅದಕ್ಕಾಗಿ ಶ್ರವಣ ವ್ಯರ್ಥವಾಗಬಾರದೆಂದರೆ ಮನನಮಾಡುವದು ಅತಿಮುಖ್ಯವಾಗಿದೆ. ಮಂಥನಾ ಅಂದರೆ ಕುಟ್ಟುವದು. ಏನು ಕುಟ್ಟುವರು ಅಂದರೆ ಕಾಳು, ತೆನೆ ಮೊದಲಾದವುಗಳನ್ನು ಕುಟ್ಟಿ ಹೊಟ್ಟಿನಿಂದ ಕಾಳುಗಳನ್ನು ಕಡೆಗೆ ಮಾಡುವದು. ಇನ್ನೊಂದು "ಧಾರಣಮ್ ಮನನಮ್" ಅಂದರೆ ಮೇಲೆ ಹೇಳಿದ ಪ್ರಕಾರ ಯಾವ ಶ್ರುತಿವಾಕ್ಯ ವಿಷಯಗಳನ್ನು ಅರ್ಥಪೂರ್ಣವಾಗಿ ಕೇಳಿರುವೆವೊ, ಆ ವಿಷಯವನ್ನು ಮನಸ್ಸಿನಲ್ಲಿ ಗಟ್ಟಿಗೊಳಿಸುವುದಕ್ಕೆ ಮನನವೆನ್ನುತ್ತಾರೆ.

**ಮನನಮ್ :** "ಸಾಧಕಬಾಧಕಪ್ರಮಾಣಾಭ್ಯಂ ಶ್ರುತಿತಾತ್ಪರ್ಯನಿರ್ಣಯ:" ಅರ್ಥ ಪ್ರಮಾಣಗಳಲ್ಲಿ ಎರಡು ಪ್ರಕಾರ :- 1 ಸಾಧಕ, 2 ಬಾಧಕ, ಇವುಗಳಲ್ಲಿ ಸಾಧಕರೂಪ ಶ್ರುತಿಪ್ರಮಾಣ ಅಂದರೆ, ಉಪನಿಷದ್ವಾಕ್ಯ ಪ್ರಮಾಣ ಅವುಗಳನ್ನು ನಿಶ್ಚಯ ಮಾಡುವಲ್ಲಿ ಅವುಗಳ ತಾತ್ಪರ್ಯವನ್ನು ನಿಶ್ಚಯ ಮಾಡುವುದೇನಿದೆಯೋ ಅದುವೇ ಮನನವೆಂದು ಕರೆಯಿಸಿಕೊಳ್ಳುವದು. ಮನನ ಮಾಡುವುದರಿಂದ ಏನಾಗುತ್ತದೆ ಮತ್ತು ಅದರ ಫಲ ಏನೆಂದರೆ, ಮನನ ಮಾಡುವುದರಿಂದ ಬ್ರಹ್ಮವೇ ನಾನೆಂದು ನಿಶ್ಚಯವಾಗುತ್ತದೆ. ಏಕೆಂದರೆ ನಿಶ್ಚಯಕ್ಕೆ ಪ್ರತಿಬಂಧಕವಾಗಿರುವುದೇ ಹೊರಟು ಹೋಗುತ್ತದೆ. ಅದು ಏನೆಂದು ನಿಜಗುಣರನ್ನೇ ಕೇಳಿರಿ, "ತನ್ನನು ಪರದಿಂದನ್ಯವೆನಲು ತನಗನ್ಯಯತೆಯಹುದು ಪರತೆ ಅದರಿಂ ಜ್ಞಾಪೇನಾಂ ನಿಜವೀ ಘಟದಂತೆಂಬುನುಮಾನಂ ನೆರೆದುಪಮೆಗಳ ಚೆನ್ನೆಸೆವಂತಾರೈವುದೇ ಮನನ ದುನ್ನತಪರವಾನೋ ಬಳಿಕ ಅಲ್ಲವೋ ಎನ್ನತಮಿಹ ಸಂಶಯವನು ತೊಲಗಿಸಿ ಮನ್ನಣೆ ಕೊಡುತಿಹದು।" ಅಂದರೆ ಮುಖ್ಯವಾಗಿ ಪರಮಾತ್ಮರಾನು ಅಲ್ಲವೋ ಅಹುದೋ ಎನ್ನುವ,

ಪ್ರಮಾಣಗತ: ಪ್ರಮೇಯಗತ ಸಂಶಯವನ್ನು ಹೋಗಲಾಡಿಸಿ ಪರಮಾತ್ಮ ಪ್ರತ್ಯಾಗಾತ್ಮ ನಾನೆ ಎಂಬ ನಿಶ್ಚಯವನ್ನುಂಟು ಮಾಡಿಕೊಳ್ಳಲು ಸಹಾಯವಾಗುತ್ತದೆ.

ಇನ್ನು ನಿದಿಧ್ಯಾಸನದ ಬಗ್ಗೆ ವಿಚಾರಿಸುವುದಾದರೆ, ಜಾಗ್ರತೆವಹಿಸಿ ಅವಲೋಕನ ಮಾಡಿ ನಾವೆಲ್ಲರೂ ಶಾಸ್ತ್ರಪರಿಣಿತರು, ಲಕ್ಷಣ ಪರಿಣಿತರು ನಮಗೆ ಏನು ಗೊತ್ತಿಲ್ಲ ಎಲ್ಲಾ ಗೊತ್ತಿದೆ ಅನ್ನುವುದೇ ಆದರೆ, ಮಾತಿನ ಬ್ರಹ್ಮತೂತಿನ ಮಡಿಕೆ ಪಾತಕನ ಕೈ ಕತ್ತಿ ಆಗಬಾರದೆಂದು ಆತ್ಮಸಾಕ್ಷಾತ್ಕಾರ ಜಿಜ್ಞಾಸುವಿಗೆ ಗೊತ್ತಿದ್ದರೆ ಸಾಕು.

"ನಿದಿಧ್ಯಾಸನ" ನೋಡಿ ಹೇಳುವ ಕೇಳುವ ಎಲ್ಲರಿಗೂ ನಿಧಿಯ ಧ್ಯಾಸ ಸಹಜವಾಗಿದೆ.

"ಮನನಕ್ಕೆ ಬಂದರ್ಥವನುಭವಗಮ್ಯ ವೆಂದೆನಿಸಿ ಸಮಾಹಿತೆಯೊಳುನಿಂದು॥ ಜನಿತ ನಿಶ್ಚಯವದಚ್ಚಳಿಯದೆ, ನೆಲೆಯಾದುದನೇ ನಿಧಿಧ್ಯಾಸವೆನ್ನುವರು". ಅರ್ಥ : ಮನನ ಮಾಡಿದ ಮೇಲೆ ಒಂದು ನಿಶ್ಚಯಾರ್ಥ ಉಂಟಾಗುತ್ತದೆ. ಅದು ಅನುಭವ ಗಮ್ಯವಾಗಬೇಕು. ಅಂದರೆ ಎಲ್ಲವನ್ನೂ ಕೆಡಿಸಬಹುದು. ಆದರೆ ಅನುಭವವನ್ನು ಕೆಡಿಸಲು ಯಾರಿಂದಲೂ ಸಾಧ್ಯವಿಲ್ಲ. ಏಕೆಂದರೆ ಶ್ರುತಿವಾಕ್ಯ, ಗುರೂಪದೇಶ, ಚಿಂತನೆ (ಮನನ)ವಾದ ಮೇಲೆ ಬರುವುದು ಅನುಭವ. ಇದುವೇ ನಿಶ್ಚಯ ಇದರ ಮೇಲೆ ಇನ್ನಾವುದಿಲ್ಲವೆಂದು ಸಮಾನವೆಂದರೆ ಎಲ್ಲದರಲ್ಲಿಯೂ ಸಮಾನ, ಅಂದರೆ ವೃತ್ತಿ ಹೊರಗಿದ್ದರೆ ಜಾತಿ-ಮತ, ಪಂಥ, ಕುಲ, ಗೋತ್ರ, ಬ್ರಹ್ಮಚರ್ಯದ ಆಶ್ರಮ, ಬ್ರಹ್ಮಣಾದಿ ವರ್ಣಗಳು ಇವುಗಳೆಲ್ಲ ತೋರದೆ ಸಮಾನವಾಗಿ ಅಂದರೆ ವಿಮಾನಯಾನ (ಗಗನದಲ್ಲಿ) ಮಾಡುವವನಿಗೆ ಒಂದು ಗುಡಿಸಲು, ಸಾವಿರ ಅಂತಸ್ಥಿನ ಕಟ್ಟಡವೂ ಸಮಾನವಾಗಿ ತೋರುವಂತೆ ಎಲ್ಲವೂ ಸಮಾನವಾಗಿ ತೋರಿದರೆ ಅದು ಸಮಾಹಿತೆ. ಇಂಥ ಸಮಾಹಿತೆಯೊಳು ನಿಂದಮೇಲೆ ಹುಟ್ಟಿದ ನಿಶ್ಚಯವು ಎಂದೆಂದಿಗೂ ನಾಶವಾಗದೆ, ನೆಲೆ ಯಾದುದು ಅಂದರೆ ಮಹಾಮೇರು ಪರ್ವತದಂತೆ ಗಟ್ಟಿಯಾದುದೇ ನಿಧಿಧ್ಯಾಸವೆನ್ನುವರು. ಇದಕ್ಕೆ ಇನ್ನು ಸಾಕಷ್ಟು ಲಕ್ಷಣಗಳಿವೆ. ಆದರೆ "ನಿಧಿ" ಅನ್ನುವದಕ್ಕೆ ಆತ್ಮತತ್ವಾದರೊಡನೆ ಕೆಡಿಸುವ ಇನ್ನೊಂದು ಅರ್ಥವಿದೆ.

**ನಿದಿಧ್ಯಾಸನಮ್** : "ಅನಾತ್ಮಾಕಾರ ವೃತ್ತಿ ತಿರಸ್ಕಾರ ಪೂರಕಾ ಆತ್ಮಕಾರವೃತ್ತಿ ಪ್ರವರ್ಧನಂ ನಿಧಿಧ್ಯಾಸನಮ್," ಅರ್ಥ ದೇಹಾದಿ ಸಕಲಪ್ರಪಂಚ ಜಡಬುದ್ಧಿ ಹೊರಟು ಹೋಗಿ ಕೇವಲ ಚೈತನ್ಯದ ಪ್ರವಾಹವು ಅಧಿಕ (ಬಲವರ್ಧನೆ) ಆದರೆ ಅದುವೇ ನಿದಿಧ್ಯಾಸನವು. ಲಕ್ಷಣ ಕಂಠಸ್ಥವಿದೆ ಎಲ್ಲರಿಗೂ ಅರ್ಥದ ಇರುವಿಕೆ ಅವರಿಗೇನೆ ಬಿಟ್ಟಿದ್ದು. ಅಂತಕರಣದಲ್ಲಿ ಗಟ್ಟಿಯಾದರೆ ಅದುವೇ ನಿದಿಧ್ಯಾಸ. ಅವನೆ ನಿಧಿಧ್ಯಾಸಿಯು (ಅಖಂಡ ಬ್ರಹ್ಮಸ್ವರೂಪಿಯು) ಲಕ್ಷಣ ಹೀಗಿದೆ ನೋಡಿರಿ.

**ನಿದಿಧ್ಯಾಸನಮ್** : "ಜೀವ ಬ್ರಹ್ಮೈಕ್ಯ ಅವಧಾರಣಮ್" ಇದರ ಅರ್ಥ ಇಷ್ಟೆ ಜೀವನಿಗೂ ಬ್ರಹ್ಮನಿಗೂ ಅಭೇದವಿದೆ. ತ್ರಿಕಾಲದಲ್ಲಿಯೂ ಭೇದವಿಲ್ಲ ಎಂದು ನಿಶ್ಚಯವನ್ನು ಗಟ್ಟಿಗೊಳಿಸುವುದು ಇಲ್ಲಿ ಆರು ಪ್ರಕಾರ ಭೇದಗಳಲ್ಲಿ ಯಾವ ಭೇದಗಳು ಅಭೇದವಾಗಿವೆ ಎಂಬುದನ್ನು ಗಮನಿಸಬೇಕು. ವಿಚಾರಿಸಿದರೆ ಜೀವ ಜೀವರ ಭೇದವೇ ಅಭೇದವಾಗಿಲ್ಲ ಅನ್ನುವಾಗ "ಜೀವ ಶಿವರ ಅಭೇದ" ಎಷ್ಟು ಕಷ್ಟವೆಂಬುವುದನ್ನು ನಾವೇ ಅರ್ಥೈಸಿಕೊಳ್ಳಬೇಕು. ಏಕೆಂದರೆ ಶ್ರವಣಾದಿಗಳ ಮುಖಾಂತರ ನಮ್ಮನ್ನು ನಾವು ಏನೆಂದು ತಿಳಿದು ಗಟ್ಟಿಯಾಗುವುದು ಮುಖ್ಯ. ಆದರೆ ಹೇಳುವದು, ಕೇಳುವದು ಮುಖ್ಯವಲ್ಲ. ಇದರರ್ಥ ಊಟ ಮಾಡಿದವರ ಹೊಟ್ಟೆ ತುಂಬುತ್ತದೆ ಎಂದು ಹೇಳಿದ ಹಾಗೆ. ನಿದಿಧ್ಯಾಸನ ಕೊನೆ ಏಕೆಂದರೆ ಹಾಲು ಮೊಸರಾಗುವದು, ಮೊಸರು ಬೆಣ್ಣೆಯಾಗುವದು, ಬೆಣ್ಣೆ ತುಪ್ಪವಾಗುವದು, ತುಪ್ಪವಾದ ಮೇಲೆ ಏನೂ ಆಗಲು ಬಾರದಿದ್ದರೂ ಒಂದು ಮಾತ್ರ ಆಗಲು ಬರುತ್ತದೆ. ಅದೇನೆಂದರೆ "ತುಪ್ಪವಾದ ಮೇಲೆ ಗಪ್ಪಾಗಲು ಬರುತ್ತದೆ" ಅಂದರೆ ಆಗುವದೆಲ್ಲವಾಯಿತು ಗಪ್ಪ. ಅಂದರೆ ಸುಮ್ಮನಿರೋದು. ಇದು ಸ್ವಾತಿ ಮಳೆ ಹನಿ ಕಪ್ಪೆ ಚಿಪ್ಪಿನಲ್ಲಿ ಬಿದ್ದು ಮುತ್ತಾದ ಮೇಲೆ ಏನೂ ಆಗಲು ಬರುವುದಿಲ್ಲ ಇದು ನಿದಿಧ್ಯಾಸನವು. ಆದ್ದರಿಂದಲೇ ಶರಣರಲ್ಲಿ ಅಗ್ರಗಣ್ಯಳಾದ ವಿರಾಗಿಣಿ ವೈರಾಗ್ಯನಿಧಿ ಅಕ್ಕಮಹಾದೇವಿ ಹೇಳುತ್ತಾರೆ.

> "ಮುತ್ತು ನೀರಲ್ಲಾಯಿತ್ತು ವಾರಿಕಲ್ಲು ನೀರಲ್ಲಾಯಿತ್ತು, ಉಪ್ಪು ನೀರಲ್ಲಾಯಿತ್ತು
> ಉಪ್ಪು ಕರಗಿತ್ತು ವಾರಿಕಲ್ಲು ಕರಗಿತ್ತು ಮುತ್ತು ಕರಗಿದದ ನಾರೂ ಕಂಡವರಿಲ್ಲ
> ಈ ಸಂಸಾರಿ ಮಾನವರು ಲಿಂಗಮುಟ್ಟಿ ಭವಭಾರಿಗಳಾದರು ನಾ ನಿಮ್ಮ ಮುಟ್ಟಿ
> ಕರಿಗೊಂಡೆನಯ್ಯ ಚೆನ್ನಮಲ್ಲಿಕಾರ್ಜುನ" ॥೧॥

ಅಕ್ಕನ ದೃಷ್ಟಾಂತ ಮೂರು. ಮುತ್ತು, ವಾ(ಆರಿ)ಕಲ್ಲು, ಉಪ್ಪು, ಯಾರು ಯಾವ ದೃಷ್ಟಾಂತಕ್ಕೊಳಪಟ್ಟ ವಸ್ತುಗಳು ಹೇಗೆ ಕರಗುತ್ತವೆ ವಿಚಾರಿಸೋಣ. ಅಕ್ಕ ಇಲ್ಲಿ ಎರಡು ದೃಷ್ಟಾಂತ ಕೊಟ್ಟಿದ್ದಾರೆ. ಒಂದು ಸಂಸಾರಿ, ಇನ್ನೊಂದು ಗಟ್ಟಿಗೊಂಡ ಮುತ್ತು. ಇನ್ನುಳಿದ ನಾಲ್ಕು ದೃಷ್ಟಾಂತಗಳನ್ನು ಮಾಡಿ ತಿಳಿಯುವ ಪ್ರಯಾಸ ಮಾಡೋಣ, ಹೇಗೆಂದರೆ ಒಂದು ಸಂಸಾರಿಕ ಎರಡು ಸಾಧಕ ಮೂರನೆಯದ್ದು ಬೋಧಕ, ನಾಲ್ಕನೆಯದ್ದು ಸಮಾಧಿಕ. ಮೊದಲನೆಯ ಸಂಸಾರಿಕನು, ಮಂಜುಗಡ್ಡೆ ಇದ್ದಂತೆ. ನೀರು ತಾನೆ ಗಟ್ಟಿಯಾಗುತ್ತದೆ ಯಾವ ಸ್ಪರ್ಶವಿಲ್ಲದೆ ತಾನೆ ಕರಗುತ್ತದೆ. ಕರಗಿಸಲು ಯಾವುದೂ ಬೇಡ, ಕ್ರಮೇಣ ತಾನೇ ಕರಗುತ್ತದೆ. ಹಾಗೆ ಸಂಸಾರಿಗಳು ಆತ್ಮತತ್ತ್ವದ ಕಡೆ ಬರದಂತೆ ತಾವೆ ಮಾಡಿಕೊಂಡು ತಾವೇ ಸಂಸಾರದಲ್ಲಿ ಕರಗಿ ಹೋಗುತ್ತಾರೆ. ಇನ್ನು ಎರಡನೆಯದ್ದು "ಉಪ್ಪು" ಅದಕ್ಕೆ ಸಮಾನ ದೃಷ್ಟಾಂತ ಸಾಧಕನು, ಆತ್ಮತತ್ತ್ವದ ಕಡೆ ಮುಖ ಮಾಡಿರುವ ಸಾಧಕ ತಾನೆ ಕರಗುವದಿಲ್ಲ. ಹೇಗೆ ಉಪ್ಪು ಕೆಲದಿನ ಆರಾಮವಾಗಿ ಗಟ್ಟಿಯಾಗಿರುತ್ತದೆ, ಆದರೆ ಯಾರು ಅದನ್ನು ಹುಟ್ಟಿಸಿದ್ದಾರೆಯೋ ಅವರನ್ನು ಕಂಡರೆ (ಅಂದರೆ ನೀರನ್ನು ಕಂಡರೆ) ಕರಗುತ್ತದೆ. ಹಾಗೆ ಪ್ರಪಂಚದಲ್ಲಿ ಹುಟ್ಟಿದ ಸಾಧಕನು ಪ್ರಪಂಚದಿಂದ ಭಿನ್ನವಾಗಿರಲು ಪ್ರಯತ್ನ ಮಾಡುವಾಗ ಪರೀಕ್ಷೆ ಬರುತ್ತವೆ. ಎಲ್ಲರೂ ಸಾಧಕರೆ ಎಲ್ಲರೂ ಬೋಧಕರೆ, ಪರೀಕ್ಷೆಗಳು ಬಂದು ಎದುರಿಗೆ ನಿಲ್ಲುವವರೆಗೂ, ಅವು ಬಂದಾಗ, ನೀರಿಂದ ಉತ್ಪತ್ತಿಯಾದ ಉಪ್ಪು ನೀರಿನ ಸ್ವರೂಪವೇ ಆಗಿಬಿಡುತ್ತದೆ. ಹಾಗೆ ವಿಷಯಗಳ ಹೊಡೆತಕ್ಕೆ ಸಾಧಕನ ಗಟ್ಟಿತನ ಕರಗಿ ವಿಷಯಾಕಾರವಾಗುತ್ತದೆ. ಇದು ಕೂಡಾ ನಿಲ್ಲುವುದಿಲ್ಲ. ಇನ್ನು ವಾರಿ ಕಲ್ಲು ಮೇಘ ಘಟ್ಟಿಗೊಂಡು ಬಿದ್ದ ದೊಡ್ಡ ಬರ್ಪಗಲ್ಲಿನಂತೆ, ಹೇಗೆಂದರೆ ಅದು ಬೇಗನೆ ತಾನು ಕರಗುವುದಿಲ್ಲ. ನೀರಿನಲ್ಲಿ ಬಿದ್ದರೂ ಕರಗುವುದಿಲ್ಲ. ಬಹುದಿನಗಳವರೆಗೆ ಇರುತ್ತೆ. ಹಿಮಪರ್ವತವು ಎಷ್ಟೇ ಗಟ್ಟಿಯಾಗಿದೆ ಎಂದು ತೋರಿದರೂ ಒಂದು ದಿನ ಕರಗುತ್ತದೆ ಹಾಗೆ ಶಾಸ್ತ್ರೋಪದೇಶ ಮಾಡುವ ಬೋಧಕನಿಗೆ ದು:ಖ ಬಂದು ಅಪ್ಪಳಿಸಿದಾಗ ಗೊತ್ತಾಗುತ್ತದೆ.

ಆಗ "ಪರೋಪದೇಶೇ ಪಾಂಡಿತ್ಯಂ ಸರ್ವೇಷಾಂ ಸುಕುರಂನೃಣಾಂ ಧರ್ಮ ಸ್ವೀಯ ಮನುಷ್ಠಾನಾಂ ಕಸ್ಯಚಿತ್ತು ಮಹಾತ್ಮನ:", ಅಲ್ಲದೆ ಗೀತೆಯಲ್ಲಿ ಭಗವಂತ ಶ್ರೀಕೃಷ್ಣ ಅರ್ಜುನನಿಗೆ ಜ್ಞಾಪಿಸಿದಂತೆ ನೆನಪಿಗೆ ತಂದುಕೊಳ್ಳಿ ಈ ಮಾತು. "ಪ್ರಜ್ಞಾವಾದಾಂಶ್ಚ ಭಾಷೆ ಅಶೋಚ್ಯಾನನ್ವಶೋಚಸ್ವಂ।" ತಿಳಿದವರ ಹಾಗೆ ಮಾತನಾಡುತ್ತಿ, ತಿಳಿಯದವರ ಹಾಗೆ ಅಳುತ್ತಿ, ಆಶ್ಚರ್ಯ ಎನ್ನುವನು ಪರಮಾತ್ಮ ಹಿಮದ ಗಟ್ಟಿಯಂತೆ ಬೋಧಕರ ಸ್ಥಿತಿ ಎಂದು ಶಾಸ್ತ್ರಗಳು ಬಹಳ

ಟೀಕಿಸಿವೆ. ಅದನ್ನರಿತು ನಡೆಯಬೇಕು. ಇನ್ನು ಸಂಕ್ಷಿಪ್ತವಾಗಿ ನಿದಿಧ್ಯಾಸನದ ಪ್ರಯೋಜನವೇನು ತಿಳಿದರೆ ಭವದಕೇಡು. ಮೊದಲು ಹೇಳಿದ ಶ್ರವಣ ಅದರಿಂದ ಚೆನ್ನಾಗಿ ಮಾಡಿದ ಮನನ, ಅದರಿಂದ ನಿರ್ಧಾರವಾದ (ಗಟ್ಟಿಯಾದ) ಪರಮಾತ್ಮನ ಅಚಲಿತವಾದ ಸ್ವರೂಪ, ಇದುವೇ ನಿಧಿಧ್ಯಾಸದ ಯಥಾರ್ಥ ಸ್ವಸ್ವರೂಪವು. ಇದರ ಪ್ರಯೋಜನವೇನೆಂದರೆ, ಉತ್ಪತ್ತಿಯಾದ ಅಹಂಕಾರದ, ಮಿಥ್ಯೆಯಾದರೂ ಸತ್ಯವಾಗಿ ತೋರುವ ಜಗತ್ತಿನ ಬಗ್ಗೆ ಇರುವ ಸತ್ಯತ್ವ ಭಾವನೆ ಹೊರನೂಕುತ್ತದೆ. ಇದುವೆ ವಿಪರೀತಭಾವನೆ. ಇದನ್ನು ಸುಟ್ಟು ಹಾಕುತ್ತದೆ. ಅಂದರೆ "ಶ್ರವಣವು ಅಜ್ಞಾನವನ್ನು" ಮನನವು ಸಂಶಯವನ್ನು, ನಿಧಿಧ್ಯಾಸನವು ವಿಪರೀತ ಭಾವನೆಯನ್ನು ಹೊಡೆದೋಡಿಸಿ, ಕೇವಲ ಪ್ರತ್ಯಗಾತ್ಮ ತಾನೆಂದರಿಯಲು ಬೇಕಾಗಿರುವ ಶ್ರವಣಾದಿಗಳನ್ನು ಮಾಡಿ ಮನೀತರಾಗುವುದೇ ಮುಖ್ಯ ಕರ್ತವ್ಯವಾಗಿದೆ.

**ಗ್ರಂಥಋಣ**


೧. ಛಾಂದೋಗ್ಯ ಉಪನಿಷತ್ – ರಾಮಕೃಷ್ಣಾಶ್ರಮ ಮೈಸೂರ
೨. ಶ್ರೀ ಮದ್‌ಭಗವದ್ಗೀತಾ – ಅದ್ವೈತಾಶ್ರಮ ಕೊಲ್ಕೊತ್ತಾ
೩. ವಿಚಾರಚಂದ್ರೋದಯ – ಶ್ರೀಮನ್ನಿಜಗುಣ ಶಿವಯೋಗಿಗಳು
೪. ಕೈವಲ್ಯಪದ್ಧತಿ – ಶ್ರೀಮನ್ನಿಜಗುಣ ಶಿವಯೋಗಿಗಳು
೫. ಪರಮಾನುಭವಭೋದೆಯ – ಶ್ರೀಮನ್ನಿಜಗುಣ ಶಿವಯೋಗಿಗಳು
೬. ವಿವೇಕ ಚೂಡಾಮಣಿ – ಜಗದ್ಗುರು ಶಂಕರಾಚಾರ್ಯರು
೭. ವೇದಾಂತ ಡಿಂಡಿಮ – ಶ್ರೀ ಸಚ್ಚಿದಾನಂದೇಂದ್ರ ಸರಸ್ವತಿ
೮. ವಚನ ತರಂಗಿಣಿ – ಹನ್ನೆರಡನೆ ಶತಮಾನದ ಅಕ್ಕಮಹಾದೇವಿಯ ವಚನ